# ಜನನ ಮರಣಗಳ ನೋಂದಣಿ ಅಧಿನಿಯಮ, 1969

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ

**ಅಧಿಸೂಚನೆ**

ಕ್ರಮಾಂಕ ಲಾ ೫೫ ಎಲ್‌ಸಿಎ ೬೯. ಬೆಂಗಳೂರು, ದಿನಾಂಕ ೧೦ನೇ ಡಿಸೆಂಬರ್ ೧೯೬೯.

ದಿನಾಂಕ ೨ನೇ ಜೂನ್‌೧೯೬೯ರ ಭಾರತ ರಾಜ್ಯಪತ್ರದ ವಿಶೇಷ ಸಂಚಿಕೆ ಭಾಗ–II ಸೆಕ್ಷನ್ ೧ರಲ್ಲಿ ಪ್ರಕಟಿಸಲಾದ ೧೯೬೯ನೆಯ ಇಸವಿಯ ಜನನ ಮರಣಗಳ ನೋಂದಣಿ ಅಧಿನಿಯಮ (೧೯೬೯ರ ೧೮ನೇ ಸಂಖ್ಯೆಯ ಅಧಿನಿಯಮ)ವನ್ನು ಸಾರ್ವಜನಿಕರ ಅವಗಾಹನೆಗಾಗಿ ಮೈಸೂರು ರಾಜ್ಯಪತ್ರದಲ್ಲಿ ಪುನ: ಪ್ರಕಟಿಸಲು ಮೈಸೂರು ರಾಜ್ಯಪಾಲರು ಆದೇಶಿಸಿದ್ದಾರೆ.

ಎಚ್.ಸುಬ್ಬರಾವ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ.

© 2003, Directorate of Economics and Statistics, Govt. of Karnataka. All Rights Reserved.

# ಜನನ  ಮರಣಗಳ ನೋಂದಣಿ   ಅಧಿನಿಯಮ, ೧೯೬೯

## ಪ್ರಕರಣಗಳ ಅನುಕ್ರಮಣಿಕೆ

### ಅಧ್ಯಾಯ I

### ಪ್ರಾರಂಭಿಕ

**ಪ್ರಕರಣಗಳು**


೧. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ

೨. ಅರ್ಥ ವಿವರಣೆಗಳು ಮತ್ತು ನಿರ್ವಚನ


### ಅಧ್ಯಾಯ II

### ನೋಂದಣಿ–ಸಿಬ್ಬಂದಿ


೩. ಭಾರತದ ರಿಜಿಸ್ಟ್ರಾರ್ – ಜನರಲ್

೪. ಮುಖ್ಯ ರಿಜಿಸ್ಟ್ರಾರ್

೫. ನೋಂದಣಿ ವಿಭಾಗಗಳು

೬. ಜಿಲ್ಲಾ ರಿಜಿಸ್ಟ್ರಾರ್

೭. ರಿಜಿಸ್ಟ್ರಾರ್‌ಗಳು


### ಅಧ್ಯಾಯ III

### ಜನನ  ಮರಣಗಳ ನೋಂದಣಿ


೮. ಜನನ  ಮರಣಗಳನ್ನು ನೋಂದಣಿ ಮಾಡತಕ್ಕ ವ್ಯಕ್ತಿಗಳು

೯. ತೋಟದಲ್ಲಿ(ಪ್ಲಾಂಟೇಷನ್) ಜನನ ಮರಣಗಳ ಸಂಬಂಧವಾದ ವಿಶಿಷ್ಟ ಉಪಬಂಧ.

೧೦. ಜನನ ಮರಣಗಳನ್ನು ಅಧಿಸೂಚಿಸುವುದು ಮತ್ತು ಮರಣ ಕಾರಣವನ್ನು ಪ್ರಮಾಣೀಕರಿಸುವುದು ಕೆಲವು ವ್ಯಕ್ತಿಗಳ ಕರ್ತವ್ಯ.

೧೧. ಸುದ್ದಿಗಾರನು ರಿಜಿಸ್ಟರಿಗೆ ಸಹಿ ಮಾಡತಕ್ಕದ್ದು

೧೨. ಸುದ್ದಿಗಾರನಿಗೆ ನೋಂದಣಿ ದಾಖಲೆಗಳ ಉದ್ಧೃತ ಭಾಗಗಳನ್ನು ಕೊಡತಕ್ಕದ್ದು.

೧೩. ಜನನ ಮತ್ತು ಮರಣಗಳ ವಿಳಂಬ ನೋಂದಣಿ

೧೪. ಶಿಶುವಿನ ಹೆಸರಿನ ನೋಂದಣಿ

೧೫. ಜನನ ಮರಣಗಳ ರಿಜಿಸ್ಟರಿನಲ್ಲಿ ದಾಖಲೆಯ ತಿದ್ದುಪಡಿ ಅಥವಾ ರದ್ದಿಯಾತಿ


### ಅಧ್ಯಾಯ IV


೧೬. ರಿಜಿಸ್ಟ್ರಾರರು ರಿಜಿಸ್ಟರುಗಳನ್ನು ವಿಧಾಯಕ ಪ್ರಪತ್ರದಲ್ಲಿ ಇಟ್ಟಿರತಕ್ಕದ್ದು.

೧೭. ಜನನ ಮರಣಗಳ ರಿಜಿಸ್ಟರಿನ ಶೋಧನೆ


© 2003, Directorate of Economics and Statistics, Govt. of Karnataka. All Rights Reserved.

೧೮. ನೋಂದಣಿ ಕಚೇರಿಗಳ ಪರಿವೀಕ್ಷಣೆ.

೧೯. ರಿಜಿಸ್ಟ್ರಾರರು ಮುಖ್ಯ ರಿಜಿಸ್ಟ್ರಾರರಿಗೆ ಸಂಕಲನಕ್ಕಾಗಿ ನಿಯತಕಾಲಿಕ ವರದಿಗಳನ್ನು ಕಳುಹಿಸತಕ್ಕದ್ದು.

## ಅಧ್ಯಾಯ V

### ಸಂಕೀರ್ಣ

೨೦. ಭಾರತದ ಹೊರಗಡೆ ಪೌರರ ಜನನ ಮರಣಗಳ ನೋಂದಣಿಗೆ ವಿಶೇಷ ಏರ್ಪಾಡು.

೨೧. ಜನನ ಅಥವಾ ಮರಣ ಸಂಬಂಧದ ಸಮಾಚಾರ ಪಡೆಯಲು ರಿಜಿಸ್ಟ್ರಾರರ ಅಧಿಕಾರ.

೨೨. ನಿರ್ದೇಶನಗಳನ್ನು ಕೊಡುವುದಕ್ಕೆ ಅಧಿಕಾರ.

೨೩. ದಂಡನೆಗಳು

೨೪. ಅಪರಾಧಗಳ ಅಭಿಸಂಧಾನಕ್ಕೆ ಅಧಿಕಾರ

೨೫. ಫಿರ್ಯಾದಿ ವ್ಯವಹರಣೆಗೆ ಮಂಜೂರಾತಿ.

೨೬. ರಿಜಿಸ್ಟ್ರಾರುಗಳು ಮತ್ತು ಸಬ್ ರಿಜಿಸ್ಟ್ರಾರರುಗಳು ಸರ್ಕಾರೀ ನೌಕರರೆಂದು ಪರಿಗಣಿತರಾಗತಕ್ಕದ್ದು.

೨೭. ಅಧಿಕಾರಿಗಳ ಪ್ರತ್ಯಾಯೋಜನೆ.

೨೮. ಸದ್ಭಾವದಿಂದ ಕೈಕೊಂಡ ಕೃತ್ಯಕ್ಕೆ ರಕ್ಷಣೆ.

೨೯. ಈ ಅಧಿನಿಯಮವು ೧೮೮೬ನೆಯ ೬ನೆಯ ಅಧಿನಿಯಮಕ್ಕೆ ಭಂಗವುಂಟು ಮಾಡತಕ್ಕದ್ದಲ್ಲ.

೩೦. ನಿಯಮಗಳನ್ನು ರಚಿಸಲು ಅಧಿಕಾರ.

೩೧. ನಿರಸನ ಮತ್ತು ಯಾವೃತ್ತಿ.

೩೨. ತೊಂದರೆಯ ನಿವಾರಣೆಗೆ ಅಧಿಕಾರ

© 2003, Directorate of Economics and Statistics, Govt. of Karnataka. All Rights Reserved.

ಅನುಮೋದನೆ ಪಡೆದ ದಿನಾಂಕ ೩೧ನೇ ಮೇ ೧೯೬೯.

೧೯೬೯ನೆಯ ಇಸವಿಯ ೧೮ನೆಯ ಅಧಿನಿಯಮ

**ಜನನ ಮರಣಗಳ ನೋಂದಣಿ ಅಧಿನಿಯಮ ೧೯೬೯.**

ಜನನ ಮರಣಗಳ ನೋಂದಣಿಯ ಅನಿಯಮನಕ್ಕೂ ತತ್ಸಂಬಂಧವಾದ ವಿಷಯಗಳ ಬಗೆಗೂ ಉಪಬಂಧ ಕಲ್ಪಿಸಲು ಏರ್ಪಟ್ಟ ಅಧಿನಿಯಮ, ಭಾರತದ ಗಣರಾಜ್ಯದ ಇಪ್ಪತ್ತನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಗೆ ಕಂಡಂತೆ ಅಧಿನಿಯಮಿತವಾಗತಕ್ಕದ್ದು.

ಅಧ್ಯಾಯ I

**ಪ್ರಾರಂಭಿಕ**

೧. <u>**(೧) ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ :**</u> ಈ ಅಧಿನಿಯಮವನ್ನು ಜನನ ಮರಣಗಳ ನೋಂದಣಿಯ ಅಧಿನಿಯಮ ೧೯೬೯ ಎಂದು ಕರೆಯಬಹುದು.

(೨) ಇದು ಇಡೀ ಭಾರತಕ್ಕೆ ಅನ್ವಯಿಸುತ್ತದೆ.

(೩) ಇದು ಕೇಂದ್ರ ಸರ್ಕಾರದವರು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ದಿನಾಂಕದಂದು ಯಾವುದೇ ರಾಜ್ಯದಲ್ಲಿ ಜಾರಿಗೆ ಬರತಕ್ಕದ್ದು.

ಪರಂತು, ಒಂದು ರಾಜ್ಯದ ಬೇರೆ ಬೇರೆ ಭಾಗಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

೨. <u>ಅರ್ಥ ವಿವರಣೆಗಳು ಮತ್ತು ನಿರ್ವಚನ</u>

(೧) ಈ ಅಧಿನಿಯಮದಲ್ಲಿ, ಸಂದರ್ಭಾನುಸಾರವಾಗಿ ಅನ್ಯಥಾ ಅರ್ಥವಾಗುವ ಹೊರತು.

(ಎ) " ಜನನ " ಎಂದರೆ ಸಜೀವ ಜನನ ಅಥವ ನಿರ್ಜೀವ ಜನನ ಎಂದು ಅರ್ಥ

(ಬಿ) " ಮರಣ "ಎಂದರೆ ಸಜೀವ ಜನನವಾದ ತರುವಾಯ ಯಾವುದೇ ಸಮಯದಲ್ಲಿ ಪ್ರಾಣದ ಎಲ್ಲ ಲಕ್ಷಣದ ಶಾಶ್ವತ ನಾಶ ಎಂದು ಅರ್ಥ.

(ಸಿ) " ಗರ್ಭ ಮರಣ " ಎಂದರೆ ಗರ್ಭಾವಸ್ಥೆಯ ಕಾಲಾವಧಿ ಎಷ್ಟೇ ಆದರೂ ಗರ್ಭ ಫಲವು ಅದರ ಮಾತೃವಿನಿಂದ ಪೂರ್ಣವಾಗಿ ನಿಷ್ಕಾಸನವಾಗುವ ಅಥವಾ ನಿಸ್ಸಾರಣವಾಗುವ ಮುನ್ನ ಸಕಲ ಪ್ರಾಣ ಲಕ್ಷಣದ ಅನುಪಸ್ಥಿತಿ ಎಂದು ಅರ್ಥ.

(ಡಿ) " ಅಜೀವ ಜನನ " ಎಂದರೆ ಗರ್ಭಾವಸ್ಥೆಯ ಕಾಲಾವಧಿ ಎಷ್ಟಾಗಿದ್ದರೂ ಗರ್ಭ ಫಲವು ಅದರ ಮಾತೃವಿನಿಂದ ಪೂರ್ಣವಾಗಿ ಹೊಂದಿದ ಯಾವ ನಿಷ್ಕ್ರಾಸನ ಅಥವಾ ನಿಸ್ಸಾರಣದ ತರುವಾಯ ಉಸಿರಾಡುವುದೋ ಅಥವಾ ಇತರ ಯಾವುದೇ ಪ್ರಾಣ ಲಕ್ಷಣವನ್ನು ತೋರಿಸುವುದೋ ಆ ನಿಷ್ಕಾಸನ ಅಥವಾ ನಿಸ್ಸಾರಣ ಎಂದು ಅರ್ಥ ಮತ್ತು ಅಂಥ ಜನನದ ಪ್ರತಿಯೊಂದು ಫಲವು ಸಜೀವ ಜಾತವೆಂದು ಭಾವಿಸಲಾಗುತ್ತದೆ.

(ಇ) " ವಿಧಾಯಕವಾದದು " ಎಂದರೆ ಈ ಅಧಿನಿಯಮದ ಮೇರೆಗೆ ರಚಿತವಾದ ನಿಯಮಗಳಿಂದ ವಿಧಾಯಕವಾದದು ಎಂದು ಅರ್ಥ.

(ಎಫ್) ಒಕ್ಕೂಟ ರಾಜ್ಯ ಕ್ಷೇತ್ರದ ಸಂಬಂಧದಲ್ಲಿ " ರಾಜ್ಯ ಸರ್ಕಾರ "ಎಂದರೆ ಅದರ ಪ್ರಶಾಸಕ ಎಂದು ಅರ್ಥ.

(ಜಿ) " ಮೃತ ಜನನ " ಎಂದರೆ ಗರ್ಭಫಲವು ನಿರ್ದಿಷ್ಟ ಗರ್ಭಾವಧಿಯಾದರೂ ತುಂಬಿರುವಲ್ಲಿ ಸಂಭವಿಸಿದ ಗರ್ಭ ಮರಣ ಎಂದು ಅರ್ಥ.

(೨) ಯಾವುದೇ ಪ್ರದೇಶದಲ್ಲಿ ಜಾರಿಯಲ್ಲಿಲ್ಲದ ಯಾವುವೇ ವಿಧಿಗೆ ಈ ಅಧಿನಿಯಮದಲ್ಲಿರುವ ಯಾವುದೇ ಉಲ್ಲೇಖವು, ಆ ಪ್ರದೇಶದ ಸಂಬಂಧದಲ್ಲಿ ಆ ಪ್ರದೇಶದಲ್ಲಿ ಜಾರಿಯಲ್ಲಿ ಸಂವಾದಿ ಶಾಸನವೇನಾದರೂ ಸಲುವಳಿಯಲ್ಲಿದ್ದರೆ ಆ ಶಾಸನಕ್ಕಿರುವ ಉಲ್ಲೇಖವೆಂದು ಅರ್ಥ ಮಾಡಿಕೊಳ್ಳತಕ್ಕದ್ದು.

© 2003, Directorate of Economics and Statistics, Govt. of Karnataka. All Rights Reserved.

ಅಧ್ಯಾಯ II

**ನೋಂದಣಿ–ಸಿಬ್ಬಂದಿ**

೩. ಭಾರತದ ರಿಜಿಸ್ಟ್ರಾರ್–ಜನರಲ್

(೧) ಕೇಂದ್ರ ಸರ್ಕಾರದವರು ರಾಜ್ಯ ಪತ್ರದಲ್ಲಿ ಅಧಿಸೂಚನೆ ಕೊಡುವ ಮೂಲಕ ಭಾರತದ ರಿಜಿಸ್ಟ್ರಾರ್–ಜನರಲ್ ಎಂದು ಪ್ರತೀತನಾಗತಕ್ಕ ಒಬ್ಬ ವ್ಯಕ್ತಿಯನ್ನು ನೇಮಿಸಬಹುದು.

(೨) ಈ ಅಧಿನಿಯಮದ ಮೇರೆಗೆ ರಿಜಿಸ್ಟ್ರಾರ್–ಜನರಲ್‌ರವರಿಗಿರುವ ಪ್ರಕಾರ್ಯಗಳ ಪೈಕಿ ಯಾವ ಪ್ರಕಾರ್ಯಗಳನ್ನು ನಿರ್ವಹಿಸಲು ಕಾಲಕಾಲಕ್ಕೆ ಅವರು ಅಧಿಕಾರ ಕೊಡಬಹುದೋ ಅಂಥ ಪ್ರಕಾರ್ಯಗಳನ್ನು ರಿಜಿಸ್ಟ್ರಾರ್ ಜನರಲ್‌ರವರ ಅಧೀಕ್ಷಣೆಯಲ್ಲಿ ಮತ್ತು ನಿರ್ದೇಶನದಲ್ಲಿ ನಿರ್ವಹಿಸುವ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರದವರು ತಾವು ಸೂಕ್ತವೆಂದು ಭಾವಿಸುವಂಥ ಇತರ ಅಧಿಕಾರಿಗಳನ್ನು ಸಹ ಅಂಥ ಉದ್ಯೋಗ ನಾಮಗಳೊಡನೆ ನಿಯಮಿಸಬಹುದು.

(೩) ರಿಜಿಸ್ಟ್ರಾರ್–ಜನರಲ್‌ರವರು ಈ ಅಧಿನಿಯಮವು ಅನ್ವಯಿಸುವ ರಾಜ್ಯ ಕ್ಷೇತ್ರಗಳಲ್ಲಿ ಜನನ ಮರಣಗಳ ನೋಂದಣಿ ಸಂಬಂಧವಾಗಿ ಸಾಮಾನ್ಯ ನಿರ್ದೇಶನಗಳನ್ನು ಹೊರಡಿಸಬಹುದು; ಮತ್ತು ಜನನ ಮರಣಗಳ ನೋಂದಣಿಯ ವಿಷಯದಲ್ಲಿ ಮುಖ್ಯ ರಿಜಿಸ್ಟ್ರಾರುಗಳ ಚಟುವಟಿಕೆಗಳನ್ನು ಸಮನ್ವಯ ಮಾಡಿ ಏಕೀಕೃತಿಗೊಳಿಸುವುದಕ್ಕೆ ತಕ್ಕ ಕ್ರಮಗಳನ್ನು ಕೈಕೊಳ್ಳತಕ್ಕದ್ದು ಮತ್ತು ಉಕ್ತ ರಾಜ್ಯ ಕ್ಷೇತ್ರಗಳಲ್ಲಿ ಈ ಅಧಿನಿಯಮದ ಕಾರ್ಯ ರೀತಿಯ ಮೇಲೆ ಒಂದು ವಾರ್ಷಿಕ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

೪. ಮುಖ್ಯ ರಿಜಿಸ್ಟ್ರಾರರು

(೧) ರಾಜ್ಯ ಸರ್ಕಾರದವರು, ರಾಜ್ಯಪತ್ರದಲ್ಲಿ ಅಧಿಸೂಚನೆ ಕೊಡುವ ಮೂಲಕ, ರಾಜ್ಯಕ್ಕೆ ಒಬ್ಬರು ಮುಖ್ಯ ರಿಜಿಸ್ಟ್ರಾರ್‌ರನ್ನು ನೇಮಕ ಮಾಡಬಹುದು.

(೨) ಮುಖ್ಯ ರಿಜಿಸ್ಟ್ರಾರ್‌ರವರಿಗಿರುವ ಪ್ರಕಾರ್ಯಗಳ ಪೈಕಿ ಯಾವ ಪ್ರಕಾರ್ಯಗಳನ್ನು ನಿರ್ವಹಿಸಲು ಕಾಲಕಾಲಕ್ಕೆ ಅವರು ಅಧಿಕಾರ ಕೊಡಬಹುದೋ ಅಂಥ ಪ್ರಕಾರ್ಯಗಳನ್ನು ಮುಖ್ಯ ರಿಜಿಸ್ಟ್ರಾರ್‌ರವರ ಅಧೀಕ್ಷಣೆಯಲ್ಲಿ ಮತ್ತು ನಿರ್ದೇಶನದಲ್ಲಿ ನಿರ್ವಹಿಸುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರದವರು ತಾವು ಸೂಕ್ತವೆಂದು ಭಾವಿಸುವಂಥ ಇತರ ಅಧಿಕಾರಿಗಳನ್ನು ಸಹ ಅಂಥ ಉದ್ಯೋಗ ನಾಮಗಳೊಡನೆ ನೇಮಿಸಬಹುದು.

(೩) ಮುಖ್ಯ ರಿಜಿಸ್ಟ್ರಾರರು ಈ ಅಧಿನಿಯಮದ ಉಪ–ಬಂಧಗಳನ್ನು ಮತ್ತು ಅದರ ಮೇಲೆ ರಚಿಸಲಾದ ನಿಯಮಗಳನ್ನು ಮತ್ತು ಆದೇಶಗಳನ್ನು ಮತ್ತು ರಾಜ್ಯ ಸರ್ಕಾರದವರು ನಿರ್ದೇಶನಗಳನ್ನೇನಾದರೂ ಕೊಟ್ಟಿದ್ದರೆ, ಅವುಗಳಿಗೊಳಪಟ್ಟು, ಕಾರ್ಯರೂಪಕ್ಕೆ ತರುವ ಬಗ್ಗೆ ರಾಜ್ಯದಲ್ಲಿ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಯಾಗಿರತಕ್ಕದ್ದು.

(೪) ಮುಖ್ಯ ರಿಜಿಸ್ಟ್ರಾರರು ಸದಕ್ಷವಾದ ನೋಂದಣಿ ಪದ್ಧತಿಯನ್ನು ಏರ್ಪಡಿಸುವ ಸಲುವಾಗಿ ರಾಜ್ಯದಲ್ಲಿ ನೋಂದಣಿ ಕೆಲಸವನ್ನು ಸಮನ್ವಯಿಸಲು ಏಕೀಕರಿಸಲು ಮತ್ತು ಪರ್ಯವೇಕ್ಷಿಸಲು, ಸೂಕ್ತ ಅನುದೇಶಗಳನ್ನು ಹೊರಡಿಸಿ ಅಥವಾ ಬೇರೆ ರೀತಿಯಲ್ಲಿ ಏರ್ಪಾಡು ಕೈಗೊಳ್ಳತಕ್ಕದ್ದು, ಮತ್ತು ರಾಜ್ಯದಲ್ಲಿ ಈ ಅಧಿನಿಯಮದ ಕಾರ್ಯ ರೀತಿಯ ಮೇಲೆ ಒಂದು ವರದಿಯನ್ನು ೧೯ನೆಯ ಪ್ರಕರಣದ (೨)ನೆಯ ಉಪ–ಪ್ರಕರಣದಲ್ಲಿ ಉಲ್ಲೇಖಿತವಾದ ಅಂಕಿ ಅಂಶ ವರದಿಯೊಡನೆ ವಿಧಾಯಕವಾಗುವ ರೀತಿಯಲ್ಲಿ ಮತ್ತು ಅಂಥ ಕಾಲಗಳಿಗೊಮ್ಮೆ ತಯಾರಿಸಿ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

೫. ನೋಂದಣಿ ವಿಭಾಗಗಳು

ರಾಜ್ಯ ಸರ್ಕಾರದವರು, ರಾಜ್ಯಪತ್ರದಲ್ಲಿ ಅಧಿಸೂಚನೆ ಕೊಡುವ ಮೂಲಕ, ರಾಜ್ಯದೊಳಗಿನ ರಾಜ್ಯ ಕ್ಷೇತ್ರವನ್ನು ತಾವು ಸೂಕ್ತವೆಂದು ಭಾವಿಸುವಂಥ ನೋಂದಣಿ ವಿಭಾಗಗಳನ್ನಾಗಿ ವಿಭಾಗಿಸತಕ್ಕದ್ದು ಮತ್ತು ಬೇರೆ ಬೇರೆ ನೋಂದಣಿ ವಿಭಾಗಗಳಿಗೆ ಬೇರೆ ಬೇರೆ ನಿಯಮಗಳನ್ನು ವಿಧಾಯಕ ಮಾಡತಕ್ಕದ್ದು.

೬. ಜಿಲ್ಲಾ ರಿಜಿಸ್ಟ್ರಾರ್

(೧) ರಾಜ್ಯ ಸರ್ಕಾರದವರು ಪ್ರತಿಯೊಂದು ರಾಜಸ್ವ ಜಿಲ್ಲೆಗೆ ಒಬ್ಬರು ಜಿಲ್ಲಾ ರಿಜಿಸ್ಟ್ರಾರ್‌ರವರನ್ನು ಮತ್ತು ತಾವು ಸೂಕ್ತವೆಂದು ಭಾವಿಸುವಷ್ಟು ಮಂದಿ ಅಪರ ಜಿಲ್ಲಾ ರಿಜಿಸ್ಟ್ರಾರರನ್ನೂ ನೇಮಕ ಮಾಡಬಹುದು ಮತ್ತು ಅವರು ಜಿಲ್ಲಾ ರಿಜಿಸ್ಟ್ರಾರರಿಗಿರುವ ಪ್ರಕಾರ್ಯಗಳ ಪೈಕಿ ಯಾವ ಪ್ರಕಾರ್ಯಗಳನ್ನು ನಿರ್ವಹಿಸಲು ಅವರು ಕಾಲ ಕಾಲಕ್ಕೆ ಅಧಿಕಾರ

© 2003, Directorate of Economics and Statistics, Govt. of Karnataka. All Rights Reserved.

ಕೊಡಬಹುದೋ ಅಂಥ ಪ್ರಕಾರ್ಯಗಳನ್ನು ಜಿಲ್ಲಾ ರಿಜಿಸ್ಟ್ರಾರ್‌ರವರ ಸಾಮಾನ್ಯ ನಿಯಂತ್ರಣಕ್ಕೆ ಮತ್ತು ನಿರ್ದೇಶನಕ್ಕೆ ಒಳಪಟ್ಟು ನಿರ್ವಹಿಸತಕ್ಕದ್ದು.

(೨) ಜಿಲ್ಲಾ ರಿಜಿಸ್ಟ್ರಾರ್‌ರವರು ಸಂಬಂಧಪಟ್ಟ ಜಿಲ್ಲೆಯಲ್ಲಿ ಜನನ ಮರಣಗಳ ನೋಂದಣಿಯನ್ನು ಮುಖ್ಯ ರಿಜಿಸ್ಟ್ರಾರ್‌ರವರ ನಿರ್ದೇಶನಕ್ಕೊಳಪಟ್ಟು ಅಧೀಕ್ಷಿಸತಕ್ಕದ್ದು ಮತ್ತು ಅವರು ಈ ಅಧಿನಿಯಮಗಳ ಉಪ ಬಂಧಗಳನ್ನು ಮತ್ತು ಈ ಅಧಿನಿಯಮದ ಉದ್ದೇಶಕ್ಕಾಗಿ ಮುಖ್ಯ ರಿಜಿಸ್ಟ್ರಾರ್‌ರವರು ಕಾಲಕಾಲಕ್ಕೆ ಹೊರಡಿಸಿದ ಆದೇಶಗಳನ್ನು ಕಾರ್ಯರೂಪಕ್ಕೆ ತರಲು ಜವಾಬ್ದಾರರಾಗತಕ್ಕದ್ದು.

೭. <u>ರಿಜಿಸ್ಟ್ರಾರ್‌ರುಗಳು</u>

(೧) ರಾಜ್ಯ ಸರ್ಕಾರದವರು ಒಂದು ಮುನಿಸಿಪಾಲಿಟಿಯ, ಪಂಚಾಯಿತಿಯ ಅಥವಾ ಒಂದು ಸ್ಥಳೀಯ ಪ್ರಾಧಿಕಾರಿ ವರ್ಗದ ಅಧಿಕಾರ ಕ್ಷೇತ್ರದೊಳಗೆ ಸೇರಿದ ಪ್ರದೇಶವನ್ನು ಅಥವಾ ಇತರ ಯಾವುದೇ ಪ್ರದೇಶವನ್ನು ಇಲ್ಲವೇ ಆ ಯಾವವೇ ಎರಡು ಅಥವಾ ಎರಡಕ್ಕಿಂತ ಹೆಚ್ಚು ಪ್ರದೇಶಗಳನ್ನು ಒಳಗೊಂಡ ಪ್ರತಿಯೊಂದು ಸ್ಥಳೀಯ ಪ್ರದೇಶಕ್ಕೆ ಒಬ್ಬರು ರಿಜಿಸ್ಟ್ರಾರ್‌ರನ್ನು ನೇಮಿಸಬಹುದು.

ಪರಂತು, ರಾಜ್ಯ ಸರ್ಕಾರದವರು ಒಂದು ಮುನಿಸಿಪಾಲಿಟಿಯ, ಪಂಚಾಯಿತಿಯ ಅಥವಾ ಇತರ ಸ್ಥಳೀಯ ಪ್ರಾಧಿಕಾರಿ ವರ್ಗದ ಸಂಬಂಧದಲ್ಲಿ ಅದರ ಯಾವನೊಬ್ಬ ಅಧಿಕಾರಿಯನ್ನು ಇಲ್ಲವೇ ಇತರ ನೌಕರನನ್ನು ರಿಜಿಸ್ಟ್ರಾರರನ್ನಾಗಿ ನೇಮಿಸಬಹುದು.

(೨) ಪ್ರತಿಯೊಬ್ಬ ರಿಜಿಸ್ಟ್ರಾರನು ೮ನೆಯ ಪ್ರಕರಣದ ಇಲ್ಲವೇ ೯ನೆಯ ಪ್ರಕರಣದ ಮೇರೆಗೆ ತನಗೆ ಕೊಟ್ಟಿರುವ ಎಲ್ಲ ಮಾಹಿತಿಯನ್ನು ಈ ಉದ್ದೇಶಕ್ಕಾಗಿ ಇಟ್ಟಿರುವ ರಿಜಿಸ್ಟರಿನಲ್ಲಿ ಶುಲ್ಕ ಅಥವಾ ಬಹುಮಾನ ಇಲ್ಲದೆ ಬರೆಯತಕ್ಕದ್ದು ಮತ್ತು ಅದಲ್ಲದೆ ತನ್ನ ಅಧಿಕಾರ ಕ್ಷೇತ್ರದಲ್ಲಿ ಸಂಭವಿಸುವ ಪ್ರತಿಯೊಂದು ಜನನದ ಅಥವಾ ಪ್ರತಿಯೊಂದು ಮರಣದ ವಿಚಾರವನ್ನು ಎಚ್ಚರಿಕೆಯಿಂದ ತಿಳಿದುಕೊಳ್ಳುವುದಕ್ಕೂ ನೋಂದಣಿ ಮಾಡಬೇಕಾಗಿರುವ ವಿವರಗಳನ್ನು ತಿಳಿದುಕೊಂಡು ನೋಂದಣಿ ಮಾಡುವುದಕ್ಕೂ ಸಹ ಏರ್ಪಾಡುಗಳನ್ನು ಮಾಡತಕ್ಕದ್ದು.

(೩) ಪ್ರತಿಯೊಬ್ಬ ರಿಜಿಸ್ಟ್ರಾರನು ಯಾವ ಸ್ಥಳೀಯ ಪ್ರದೇಶಕ್ಕೆ ನಿಯುಕ್ತನಾಗಿದ್ದಾನೋ ಅಲ್ಲಿ ಆತನಿಗೆ ಒಂದು ಕಾರ್ಯಾಲಯವಿರತಕ್ಕದ್ದು.

(೪) ಪ್ರತಿಯೊಬ್ಬ ರಿಜಿಸ್ಟ್ರಾರನು ಮುಖ್ಯ ರಿಜಿಸ್ಟ್ರಾರನು ನಿರ್ದೇಶಿಸಬಹುದಾದ ದಿನಗಳಲ್ಲಿ ಮತ್ತು ಅಂಥ ವೇಳೆಗಳಲ್ಲಿ ಜನನಗಳ ಮತ್ತು ಮರಣಗಳನ್ನು ನೊಂದಣಿ ಮಾಡುವ ಉದ್ದೇಶಕ್ಕಾಗಿ ಕಾರ್ಯಾಲಯಕ್ಕೆ ಬರತಕ್ಕದ್ದು ಮತ್ತು ರಿಜಿಸ್ಟ್ರಾರನ ಕಾರ್ಯಾಲಯದ ಹೊರಬಾಗಿಲಿನಲ್ಲಿ ಅಥವಾ ಅದರ ಸಮೀಪದ ಪ್ರಮುಖ ಸ್ಥಳವೊಂದರಲ್ಲಿ ಆತನ ಹೆಸರನ್ನು ಮತ್ತು ಆತನು ಯಾವ ಸ್ಥಳೀಯ ಪ್ರದೇಶಕ್ಕೆ ನಿಯುಕ್ತನಾಗಿದ್ದಾನೋ ಆ ಸ್ಥಳೀಯ ಪ್ರದೇಶದ ಜನನ ಮರಣದ ರಿಜಿಸ್ಟ್ರಾರ್ ಎಂಬ ಉದ್ಯೋಗ ನಾಮವನ್ನು ಮತ್ತು ಹಾಜರಾಗುವ ದಿನಗಳನ್ನು, ವೇಳೆಗಳನ್ನು, ಸ್ಥಳೀಯ ಭಾಷೆಯಲ್ಲಿ ಬರೆದಿರುವ ಒಂದು ಫಲಕವನ್ನು ಇರಿಸತಕ್ಕದ್ದು.

(೫) ರಿಜಿಸ್ಟ್ರಾರರು ಮುಖ್ಯ ರಿಜಿಸ್ಟ್ರಾರ್‌ರವರ ಪೂರ್ವಾನುಮೋದನೆ ಪಡೆದು ಸಬ್ ರಿಜಿಸ್ಟ್ರಾರುಗಳನ್ನು ನೇಮಿಸಿ ತನ್ನ ಅಧಿಕಾರ ಕ್ಷೇತ್ರದೊಳಗಿನ ನಿರ್ದಿಷ್ಟ ಪ್ರದೇಶಗಳ ಸಂಬಂಧದಲ್ಲಿ ತನ್ನ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಅವರಿಗೆ ವಹಿಸಿಕೊಡಬಹುದು.

© 2003, Directorate of Economics and Statistics, Govt. of Karnataka. All Rights Reserved.

ಅಧ್ಯಾಯ III

## ಜನನ ಮರಣಗಳ ನೋಂದಣಿ

**೮. <u>ಜನನ ಮರಣಗಳನ್ನು ನೋಂದಣಿ ಮಾಡತಕ್ಕ ವ್ಯಕ್ತಿಗಳು</u>**

(೧) ೧೬ನೇ ಪ್ರಕರಣದ (೧)ನೆಯ ಉಪ-ಪ್ರಕರಣದ ಮೇರೆಗೆ ರಾಜ್ಯ ಸರ್ಕಾರದವರಿಂದ ವಿಧಾಯಕವಾಗಿರುವ ಪ್ರಪತ್ರಗಳಲ್ಲಿ ದಾಖಲು ಮಾಡತಕ್ಕ ನಾನಾ ವಿವರಗಳ ಮಾಹಿತಿಯನ್ನು ತಾವು ತಿಳಿದಷ್ಟು ಮಟ್ಟಿಗೆ ಮತ್ತು ನಂಬುವಷ್ಟು ಮಟ್ಟಿಗೆ, ವಿಧಾಯಕವಾಗಬಹುದಾದಂಥ ಸಮಯದೊಳಗಾಗಿ ರಿಜಿಸ್ಟ್ರಾರ್‌ರವರಿಗೆ ಮೌಖಿಕವಾಗಿ ಇಲ್ಲವೇ ಲಿಖಿತವಾಗಿ ಕೊಡುವುದು ಅಥವಾ ಕೊಡಿಸುವುದು ಈ ಮುಂದೆ ಹೇಳುವ ವ್ಯಕ್ತಿಗಳ ಕರ್ತವ್ಯವಾಗಿರತಕ್ಕದ್ದು.

(ಎ) (ಬಿ)ಯಿಂದ (ಇ)ವರೆಗಿನ ಖಂಡಗಳಲ್ಲಿ ಉಲ್ಲೇಖಿತವಾದ ಯಾವುದೇ ಸ್ಥಳವಾಗಿರದೆ, ವಾಸದ ಅಥವಾ ವಾಸದ್ದಲ್ಲದ ಮನೆಯಲ್ಲಿ ಸಂಭವಿಸಿದ ಜನನ ಮತ್ತು ಮರಣಗಳ ಸಂಬಂಧದಲ್ಲಿ, ಮನೆಯ ಯಜಮಾನ, ಅಥವಾ ಆ ಮನೆಯಲ್ಲಿ ಒಂದಕ್ಕಿಂತ ಹೆಚ್ಚು ಕುಟುಂಬಗಳು ವಾಸವಾಗಿರುವ ಸಂದರ್ಭದಲ್ಲಿ ಆ ಕುಟುಂಬದ ಯಜಮಾನ-ಯಜಮಾನನೆಂದರೆ ಆ ಮನೆಯಿಂದ ಇಲ್ಲವೇ ಕುಟುಂಬದಿಂದ ಯಜಮಾನನೆಂದು ಅಂಗೀಕೃತನಾದವನು ಮತ್ತು ಜನನವನ್ನು ಅಥವಾ ಮರಣವನ್ನು ವರದಿ ಮಾಡತಕ್ಕ ಅವಧಿಯಲ್ಲಿ ಆತನು ಮನೆಯಲ್ಲಿರದಿದ್ದರೆ, ಮನೆಯಲ್ಲಿರುವ ಯಜಮಾನನ ಅತ್ಯಂತ ನಿಕಟ ಬಂಧು, ಮತ್ತು ಅಂಥ ಯಾವ ವ್ಯಕ್ತಿಯು ಇಲ್ಲದಿದ್ದರೆ ಉಕ್ತ ಅವಧಿಯಲ್ಲಿರುವ ವಯೋಧಿಕನಾದ ವಯಸ್ಕ ಪುರುಷ ವ್ಯಕ್ತಿ;

(ಬಿ) ಒಂದು ಆಸ್ಪತ್ರೆಯಲ್ಲಿ, ಆರೋಗ್ಯ ಕೇಂದ್ರದಲ್ಲಿ, ಪ್ರಸವ ಗೃಹದಲ್ಲಿ, ಇಲ್ಲವೇ ಉಪಚಾರ ಗೃಹದಲ್ಲಿ, ಇಲ್ಲವೇ ಅದುವೇ ಬಗೆಯ ಇತರ ಸಂಸ್ಥೆಯಲ್ಲಿ ನಡೆದ ಜನನ ಮತ್ತು ಮರಣಗಳ ಸಂದರ್ಭದಲ್ಲಿ ಪ್ರಭಾರವಿರುವ ವೈದ್ಯಾಧಿಕಾರಿ ಅಥವಾ ಈ ಕುರಿತು ಆತನಿಂದ ಅಧೀಕೃತನಾದ ಯಾವನೇ ಒಬ್ಬವ್ಯಕ್ತಿ;

(ಸಿ) ಒಂದು ಜೈಲಿನಲ್ಲಿ ಸಂಭವಿಸಿದ ಜನನ ಮತ್ತು ಮರಣಗಳ ಸಂದರ್ಭದಲ್ಲಿ ಅದರ ಪ್ರಭಾರದಲ್ಲಿರುವ ಜೈಲರು;

(ಡಿ) ಛತ್ರದಲ್ಲಿ, ವಸತಿ ನಿಲಯದಲ್ಲಿ, ಧರ್ಮ ಶಾಲೆಯಲ್ಲಿ, ಭೋಜನಾವಾಸದಲ್ಲಿ ವಸತಿ ಗೃಹದಲ್ಲಿ, ತಂಗು ಮನೆಯಲ್ಲಿ, ಸೇನಾ ವಾಸದಲ್ಲಿ, ಹೆಂಡದಂಗಡಿಯಲ್ಲಿ ಅಥವಾ ಸಾರ್ವಜನಿಕ ವಿಹಾರ ಸ್ಥಳದಲ್ಲಿ ಸಂಭವಿಸಿದ ಜನನ ಮತ್ತು ಮರಣಗಳ ಸಂದರ್ಭದಲ್ಲಿ ಅದರ ಪ್ರಭಾರವಿರುವ ವ್ಯಕ್ತಿ. ;

(ಇ) ಸಾರ್ವಜನಿಕ ಸ್ಥಳದಲ್ಲಿ ಪರಿತ್ಯಕ್ತವಾದ ಯಾವುದೇ ನವಜಾತ ಶಿಶುವಿನ ಅಥವಾ ಮೃತ ದೇಹದ ಸಂಬಂಧದಲ್ಲಿ, ಗ್ರಾಮದ ಸಂದರ್ಭದಲ್ಲಿ ಆ ಗ್ರಾಮದ ಮುಖ್ಯಸ್ಥ ಇಲ್ಲವೇ ಇತರ ಸಂವಾದಿ ಅಧಿಕಾರಿ ಮತ್ತು ಇತರ ಸ್ಥಳಗಳಲ್ಲಿ ಸ್ಥಳೀಯ ಪೋಲೀಸ್ ಸ್ಟೇಷನ್ನಿನ ಪ್ರಭಾರದಲ್ಲಿರುವ ಅಧಿಕಾರಿ ;

ಪರಂತು, ಅಂಥ ಶಿಶುವನ್ನು ಅಥವಾ ಮೃತದೇಹವನ್ನು ಕಾಣುವ ಯಾವನೇ ವ್ಯಕ್ತಿಯು ಅಥವಾ ಅಂಥ ಶಿಶುವನ್ನು ಇಲ್ಲವೇ ಮೃತದೇಹವನ್ನು ಯಾರ ವಶಕ್ಕೆ ಕೊಟ್ಟಿದೆಯೋ ಆ ಯಾವನೇ ವ್ಯಕ್ತಿಯು ಅಂಥ ವಿಷಯವನ್ನು ಪೂರ್ವೋಕ್ತ ಮುಖ್ಯಸ್ಥನಿಗೆ ಅಥವಾ ಅಫೀಸರಿಗೆ ತಿಳಿಯಪಡಿಸತಕ್ಕದ್ದು;

(ಎಫ್) ಬೇರೆ ಯಾವುದೇ ಸ್ಥಳದಲ್ಲಿ ವಿಧಾಯಕವಾಗಬಹುದಾದಂಥ ವ್ಯಕ್ತಿ.

(೨) (೧) ನೆಯ ಉಪ-ಪ್ರಕರಣದಲ್ಲಿ ಏನೇ ಅಡಕವಾಗಿದ್ದರೂ ಸರಿಯೇ, ರಾಜ್ಯ ಸರ್ಕಾರದವರು ಆದೇಶದ ಮೂಲಕ ಒಂದು ನೋಂದಣಿ ವಿಭಾಗದಲ್ಲಿ ಇರುವ ಸ್ಥಿತಿಗತಿಗಳನ್ನು ಗಮನಿಸಿ, (೧)ನೆಯ ಉಪ-ಪ್ರಕರಣದ (ಎ) ಖಂಡದಲ್ಲಿ ನಿರ್ದಿಷ್ಟವಾದ ವ್ಯಕ್ತಿಗಳ ಬದಲಾಗಿ ಈ ಕುರಿತು ರಾಜ್ಯ ಸರ್ಕಾರದವರು ಉದ್ಯೋಗ ನಾಮದಿಂದ ನಿರ್ದಿಷ್ಟಪಡಿಸುವ ಯಾವನೇ ವ್ಯಕ್ತಿಯು, ಆ ಆದೇಶದಲ್ಲಿ ನಿರ್ದಿಷ್ಟವಾಗಬಹುದಾದಂಥ ಅವಧಿಯವರೆಗೆ, ಆ ಖಂಡದಲ್ಲಿ ಉಲ್ಲೇಖಿತವಾದ ಮನೆಯಲ್ಲಿ ಸಂಭವಿಸಿದ ಜನನಗಳ ಮತ್ತು ಮರಣಗಳ ಸಂಬಂಧವಾದ ಮಾಹಿತಿಯನ್ನು ಕೊಡತಕ್ಕದ್ದು ಅಥವಾ ಕೊಡಿಸತಕ್ಕದ್ದು.

**೯. <u>ತೋಟದಲ್ಲಿ (ಪ್ಲಾಂಟೇಷನ್) ಜನನ ಮರಣಗಳ ಸಂಬಂಧವಾದ ವಿಶಿಷ್ಟ ಉಪಬಂಧ</u>**

ತೋಟದಲ್ಲಿ ಸಂಭವಿಸಿದ ಜನನ ಮರಣಗಳ ಸಂಬಂಧದಲ್ಲಿ ಆ ತೋಟದ ಅಧೀಕ್ಷಕನು ೮ನೆಯ ಪ್ರಕರಣದಲ್ಲಿ ಉಲ್ಲೇಖಿತವಾದ ಮಾಹಿತಿಯನ್ನು ರಿಜಿಸ್ಟ್ರಾರ್‌ರವರಿಗೆ ಕೊಡತಕ್ಕದ್ದು ಇಲ್ಲವೇ ಕೊಡಿಸತಕ್ಕದ್ದು.

© 2003, Directorate of Economics and Statistics, Govt. of Karnataka. All Rights Reserved.

ಪರಂತು, ೮ನೆಯ ಪ್ರಕರಣದ (೧)ನೆಯ ಉಪ–ಪ್ರಕರಣದ (ಎ) ಯಿಂದ (ಎಫ್) ಖಂಡಗಳಲ್ಲಿ ಉಲ್ಲೇಖಿತರಾದ ವ್ಯಕ್ತಿಗಳು ಆ ತೋಟದ ಅಧೀಕ್ಷಕರಿಗೆ ಅವಶ್ಯ ವಿವರಗಳನ್ನು ಒದಗಿಸತಕ್ಕದ್ದು.

ವಿವರಣೆ:– ಈ ಪ್ರಕರಣದಲ್ಲಿ ಬರುವ "ತೋಟ" ಎಂದರೆ ವಿಸ್ತೀರ್ಣದಲ್ಲಿ ೪ ಹೆಕ್ಟೇರುಗಳಿಗಿಂತ ಕಡಿಮೆಯಿಲ್ಲದಿದ್ದು ಚಾ, ಕಾಫಿ, ಮೆಣಸು, ರಬ್ಬರ್, ಯಾಲಕ್ಕಿ, ಸಿಂಕೋನ ಅಥವಾ ರಾಜ್ಯ ಸರ್ಕಾರದವರು ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟ ಪಡಿಸಬಹುದಾದಂಥ ಬೆಳೆಗಳ ಉತ್ಪಾದನೆಗೆ ಸಿದ್ಧವಾಗುತ್ತಿರುವ ಅಥವಾ ವಾಸ್ತವವಾಗಿ ಉತ್ಪಾದಿಸುತ್ತಿರುವ ಯಾವುದೇ ಭೂಮಿಯೆಂದೂ ಮತ್ತು " ತೋಟದ ಅಧೀಕ್ಷಕ ಎಂಬ ಮಾತಿಗೆ ತೋಟದಲ್ಲಿ ಕಾರ್ಮಿಕರ ಮತ್ತು ಕೆಲಸದ ಪ್ರಭಾರವಿರುವ ಅಥವಾ ಪರ್ಯವೇಕ್ಷಣೆಯಿರುವ–ಮ್ಯಾನೇಜರ್, ಸೂಪರಿಂಟೆಂಡೆಂಟ್ ಅಥವಾ ಇತರ ಯಾವುದೇ ವ್ಯಕ್ತಿ ".

೧೦. ಜನನ ಮರಣಗಳನ್ನು ಅಧಿಸೂಚಿಸುವುದು ಮತ್ತು ಮರಣ ಕಾರಣಗಳನ್ನು ಪ್ರಮಾಣೀಕರಿಸುವುದು ಕೆಲವು ವ್ಯಕ್ತಿಗಳ ಕರ್ತವ್ಯ

(೧) (i) ಯಾವುದೇ ಜನನದ ಅಥವಾ ಮರಣದ ಕಾಲದಲ್ಲಿ ಇದ್ದ ಸೂಲಗಿತ್ತಿ ಅಥವಾ ವೈದ್ಯ ಚಿಕಿತ್ಸಕ ಇಲ್ಲವೇ ಆರೋಗ್ಯ ಚಿಕಿತ್ಸಕನು;

(ii) ಮೃತ ದೇಹಗಳ ವಿಲೇವಾರಿಗೆ ಮೀಸಲಾಗಿದ್ದ ಸ್ಥಳದ ಪಾಲಕನು ಅಥವಾ ಮಾಲೀಕನು ಅಥವಾ ಅಂಥ ಸ್ಥಳದಲ್ಲಿ ಇರತಕ್ಕದ್ದೆಂದು ಸ್ಥಳೀಯ ಪ್ರಾಧಿಕಾರಿ ವರ್ಗದಿಂದ ವಿಧಿಸಲ್ಪಟ್ಟ ಯಾವನೇ ವ್ಯಕ್ತಿಯು, ಅಥವಾ

(iii) ರಾಜ್ಯ ಸರ್ಕಾರದವರು ಆತನ ಉದ್ಯೋಗ ನಾಮದಿಂದ ಈ ಕುರಿತು ನಿರ್ದಿಷ್ಟಪಡಿಸಬಹುದಾದ ಇತರ ಯಾವನೇ ವ್ಯಕ್ತಿಯು ಆತನು ಇಲ್ಲವೇ ಆಕೆ ಹೋಗಿ ನೋಡಿದ ಅಥವಾ ಸಮ್ಮುಖದಲ್ಲಿದ್ದ ಅಥವಾ ವಿಧಾಯಕವಾಗಬಹುದಾದಂಥ ಪ್ರದೇಶಗಳಲ್ಲಿ ಸಂಭವಿಸಿದ ಪ್ರತಿಯೊಂದು ಜನನವನ್ನು ಇಲ್ಲವೇ ಮರಣವನ್ನು ಅಥವಾ ಇವೆರಡನ್ನು ವಿಧಾಯಕವಾಗಬಹುದಾದಂಥ ಕಾಲದೊಳಗೆ ಮತ್ತು ಅಂಥ ರೀತಿಯಲ್ಲಿ ರಿಜಿಸ್ಟ್ರಾರರಿಗೆ ಅಧಿಸೂಚಿಸುವುದು ಆತನ ಇಲ್ಲವೇ ಆಕೆಯು ಕರ್ತವ್ಯವಾಗಿರತಕ್ಕದ್ದು.

(೨) ಯಾವುದೇ ದೇಶದಲ್ಲಿ, ರಾಜ್ಯಸರ್ಕಾರದವರು, ಅಲ್ಲಿ ಈ ಸಂಬಂಧವಾಗಿ ದೊರೆಯುವ ಸೌಲಭ್ಯಗಳನ್ನು ಗಮನದಲ್ಲಿರಿಸಿಕೊಂಡು, ಮರಣ ಕಾರಣವನ್ನು ಕುರಿತು ಒಂದು ಪ್ರಮಾಣ ಪತ್ರವನ್ನು ರಿಜಿಸ್ಟ್ರಾರನು ವಿಧಾಯಕವಾಗಬಹುದಾದಂಥ ವ್ಯಕ್ತಿಯಿಂದ ಮತ್ತು ಅಂಥ ಪ್ರಪತ್ರದಲ್ಲಿ ಪಡೆಯತಕ್ಕದ್ದೆಂದು ವಿಧಿಸಬಹುದು.

(೩) ಮರಣ ಕಾರಣದ ಪ್ರಮಾಣಪತ್ರವನ್ನು ಪಡಯತಕ್ಕದ್ದೆಂದು ರಾಜ್ಯ ಸರ್ಕಾರದವರು (೨)ನೆಯ ಉಪ–ಪ್ರಕರಣದ ಮೇರೆಗೆ ವಿಧಿಸಿದಲ್ಲಿ, ತನ್ನ ಹಿಂದಿನ ಅಸ್ವಾಸ್ಥ್ಯ ಕಾಲದಲ್ಲಿ ಒಬ್ಬ ವೈದ್ಯವೃತ್ತಿಕನಿಂದ ಉಪಚಾರ ಪಡೆದ ಯಾವನೇ ವ್ಯಕ್ತಿಯು ಮೃತನಾದ ಸಂದರ್ಭದಲ್ಲಿ, ವೈದ್ಯ ವೃತ್ತಿಕನು, ಆ ವ್ಯಕ್ತಿಯ ಮರಣಾಂತರ ಮರಣ ಸಂಬಂಧವಾದ ಮಾಹಿತಿ ಕೊಡತಕ್ಕದ್ದೆಂದು ಈ ಅಧಿನಿಯಮದ ಮೇರೆಗೆ ವಿಧಿಸಲ್ಪಟ್ಟ ವ್ಯಕ್ತಿಗೆ, ತಾನು ತಿಳಿದಿರುವಷ್ಟು ಮತ್ತು ನಂಬುವಷ್ಟು ಮಟ್ಟಿಗೆ ಮರಣ ಕಾರಣವನ್ನು ನಿರೂಪಿಸಿ ವಿಧಾಯಕ ಪ್ರಪತ್ರದಲ್ಲಿ ಒಂದು ಪ್ರಮಾಣ ಪತ್ರವನ್ನು ಶುಲ್ಕವೇನನ್ನೂ ವಿಧಿಸದೆ ಕೂಡಲೇ ಕೊಡತಕ್ಕದ್ದು, ಮತ್ತು ಆ ಪ್ರಮಾಣದ ಪತ್ರವನ್ನು ಅಂಥ ವ್ಯಕ್ತಿಯು ಸ್ವೀಕರಿಸಿ, ಈ ಅಧಿನಿಯಮದಿಂದ ವಿಧಿಸಲ್ಪಟ್ಟ ಪ್ರಕಾರ ಮರಣ ಸಂಬಂಧವಾದ ಮಾಹಿತಿಯನ್ನು ಕೊಡುವ ಕಾಲಕ್ಕೆ ರಿಜಿಸ್ಟ್ರಾರರಿಗೆ ಒಪ್ಪಿಸಿಕೊಡತಕ್ಕದ್ದು.

೧೧. ಸುದ್ದಿಗಾರನು ರಿಜಿಸ್ಟರಿಗೆ ಸಹಿ ಮಾಡತಕ್ಕದ್ದು

ಈ ಅಧಿನಿಯಮದ ಮೇರೆಗೆ ಬೇಕಾದ ಯಾವುದೇ ಮಾಹಿತಿಯನ್ನು ರಿಜಿಸ್ಟ್ರಾರರಿಗೆ ಮೌಖಿಕವಾಗಿ ಕೊಟ್ಟ ಪ್ರತಿಯೊಬ್ಬ ಯಾವನೇ ವ್ಯಕ್ತಿಯು ಈ ಸಂಬಂಧವಾಗಿ ಇಟ್ಟಿರುವ ರಿಜಿಸ್ಟರಿನಲ್ಲಿ ತನ್ನ ಹೆಸರು, ವಿವರ ಮತ್ತು ವಾಸಸ್ಥಳವನ್ನು ಬರೆಯತಕ್ಕದ್ದು ಮತ್ತು ಅವನು ಬರಯಲಾರದವನಾದ ಪಕ್ಷದಲ್ಲಿ, ರಿಜಿಸ್ಟರಿನಲ್ಲಿ ತನ್ನ ಹೆಸರು, ವಿವರ ಮತ್ತು ವಾಸಸ್ಥಳದ ಇದಿರಿಗೆ ತನ್ನ ಹೆಬ್ಬೆಟ್ಟು ಗುರುತು ಹಾಕತಕ್ಕದ್ದು ಮತ್ತು ಅಂಥ ಸಂದರ್ಭದಲ್ಲಿ ಈ ವಿವರಗಳನ್ನು ರಿಜಿಸ್ಟರಿನಲ್ಲಿ ಬರೆಯತಕ್ಕದ್ದು.

೧೨. ಸುದ್ದಿಗಾರನಿಗೆ ನೋಂದಣಿ ದಾಖಲೆಗಳ ಉದ್ಧೃತ ದಾಖಲೆಗಳನ್ನು ಕೊಡತಕ್ಕದ್ದು

© 2003, Directorate of Economics and Statistics, Govt. of Karnataka. All Rights Reserved.

ರಿಜಿಸ್ಟ್ರಾರನು, ಒಂದು ಜನನದ ಇಲ್ಲವೇ ಮರಣದ ನೋಂದಣಿ ಕೆಲಸವು ಪೂರ್ತಿಯಾದೊಡನೆ, (೮)ನೆಯ ಪ್ರಕರಣದ ಇಲ್ಲವೇ (೯)ನೆಯ ಪ್ರಕರಣದ ಮೇರೆಗೆ ಮಾಹಿತಿ ಕೊಟ್ಟ ವ್ಯಕ್ತಿಗೆ ಆ ರಿಜಿಸ್ಟರಿನಿಂದ ಅಂಥ ಜನನಕ್ಕೆ ಇಲ್ಲವೇ ಮರಣಕ್ಕೆ ಸಂಬಂಧಿಸಿದ ವಿಧಾಯಕ ವಿವರಗಳ ಒಂದು ಉದ್ಧೃತ ಭಾಗವನ್ನು ತನ್ನ ರುಜು ಹಾಕಿ ಶುಲ್ಕ ರಹಿತವಾಗಿ ಕೊಡತಕ್ಕದ್ದು.

೧೩. ಜನನ ಮರಣಗಳ ವಿಳಂಬ ನೋಂದಣಿ

(೧) ಯಾವ ಜನನದ ಇಲ್ಲವೇ ಮರಣದ ಮಾಹಿತಿಯನ್ನು, ಆ ಬಗ್ಗೆ ನಿರ್ದಿಷ್ಟವಾದ ಅವಧಿ ಮುಗಿದ ಮೇಲೆ ಆದರೆ ಅದು ಘಟಿಸಿದಂದಿನಿಂದ ಮೂವತ್ತು ದಿನಗಳೊಳಗಾಗಿ ಮಾಹಿತಿಯನ್ನು ರಿಜಿಸ್ಟ್ರಾರರಿಗೆ ಕೊಡಲಾಗಿದೆಯೋ ಆ ಯಾವುದೇ ಜನನ ಇಲ್ಲವೇ ಮರಣವನ್ನು ವಿಧಾಯಕವಾಗಬಹುದಾದಂಥ ವಿಳಂಬ ಶುಲ್ಕ ಸಂದಾಯವಾದ ಮೇಲೆ ನೋಂದಣಿ ಮಾಡತಕ್ಕದ್ದು.

(೨) ಯಾವ ಜನನದ ಇಲ್ಲವೇ ಮರಣದ ಸಂಬಂಧದ ವಿಳಂಬದ ಮಾಹಿತಿಯನ್ನು ಅದು ಘಟಿಸಿದಂದಿನಿಂದ ಮೂವತ್ತು ದಿನಗಳ ತರುವಾಯ ಆದರೆ ಒಂದು ವರ್ಷದೊಳಗಾಗಿ ರಿಜಿಸ್ಟ್ರಾರರಿಗೆ ಕೊಡಲಾಗಿದೆಯೋ ಆ ಯಾವುದೇ ಜನನ ಅಥವಾ ಮರಣವನ್ನು ವಿಧಾಯಕ ಪ್ರಾಧಿಕಾರಿಯ ಲಿಖಿತವಾದ ಅನುಮತಿಯಿಂದ ಮಾತ್ರ ಮತ್ತು ವಿಧಾಯಕ ಶುಲ್ಕ ಸಂದಾಯವಾದ ಮೇಲೆ ಮತ್ತು ಒಬ್ಬ ಪವಿತ್ರ ಪ್ರಮಾಣಾತನ (ನೋಟೆಡ್ ಪಬ್ಲಿಕ್) ಅಥವಾ ಈ ಕುರಿತು ರಾಜ್ಯ ಸರ್ಕಾರದಿಂದ ಅಧಿಕೃತನಾದ ಇತರ ಯಾವನೊಬ್ಬ ಅಧಿಕಾರಿಯ ಮುಂದೆ ಮಾಡಿದ ಅಫಿಡೇವಿಟನ್ನು ಹಾಜರು ಪಡಿಸಿದ ಮೇಲೆ ಮಾತ್ರ ನೋಂದಣಿ ಮಾಡತಕ್ಕದ್ದು.

(೩) ಯಾವ ಜನನವು ಇಲ್ಲವೇ ಮರಣವು ಅದು ಘಟಿಸಿದಂದಿನಿಂದ ಒಂದು ವರ್ಷದೊಳಗಾಗಿ ನೋಂದಣಿಯಾಗಿಲ್ಲವೋ ಆ ಜನನವನ್ನು ಇಲ್ಲವೇ ಮರಣವನ್ನು ಒಬ್ಬ ಒಂದನೇ ವರ್ಗದ ದಂಡಾಧಿಕಾರಿ, ಅಥವಾ ಒಬ್ಬ ಮಹಾಪ್ರಾಂತ ದಂಡಾಧಿಕಾರಿಯು (ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟನು) ಜನನದ ಅಥವಾ ಮರಣದ ಯಥಾರ್ಥತೆಯನ್ನು ಪರಿಶೋಧಿಸಿದ ಮೇಲೆ ಆದೇಶ ಕೊಟ್ಟ ತರುವಾಯ ಮತ್ತು ವಿಧಾಯಕ ಶುಲ್ಕ ಕೊಟ್ಟ ತರುವಾಯ ನೋಂದಣಿ ಮಾಡತಕ್ಕದ್ದು.

(೪) ಈ ಪ್ರಕರಣದ ಉಪ-ಬಂಧಗಳ ಯಾವುದೇ ಜನನವನ್ನು ಇಲ್ಲವೇ ಮರಣವನ್ನು ಆ ಬಗ್ಗೆ ನಿರ್ದಿಷ್ಟವಾದ ಕಾಲದೊಳಗಾಗಿ ನೋಂದಣಿ ಮಾಡಲು ತಪ್ಪಿದ ಬಗ್ಗೆ ಯಾವನೇ ವ್ಯಕ್ತಿಯ ಮೇಲೆ ಕೈಕೊಳ್ಳಬಹುದಾದ ಯಾವುದೇ ಕ್ರಮಕ್ಕೆ ಪ್ರತಿಕೂಲವಾಗತಕ್ಕದ್ದಲ್ಲ ಮತ್ತು ಅಂಥ ಯಾವುದೇ ಜನನ ಅಥವಾ ಮರಣವನ್ನು ಅಂಥ ಯಾವುದೇ ಕ್ರಮವು ನಡೆಯುತ್ತಿರುವಾಗ ನೋಂದಣಿ ಮಾಡಬಹುದು.

೧೪. ಶಿಶುವಿನ ಹೆಸರಿನ ನೋಂದಣಿ

ಯಾವುದೇ ಶಿಶುವಿನ ಜನನವನ್ನು ಹೆಸರು ಕೊಡದೆ ನೋಂದಣಿ ಮಾಡಿರುವಲ್ಲಿ ಅಂಥ ಶಿಶುವಿನ ತಂದೆ ಇಲ್ಲವೇ ತಾಯಿ ಅಥವಾ ಸಂರಕ್ಷಕನು ಶಿಶುವಿನ ಹೆಸರಿನ ಮಾಹಿತಿಯನ್ನು ಮೌಖಿಕವಾಗಿ ಇಲ್ಲವೇ ಲಿಖಿತವಾಗಿ ರಿಜಿಸ್ಟ್ರಾರ್‌ರಿಗೆ ಕೊಡತಕ್ಕದ್ದು ಮತ್ತು ಆ ತರುವಾಯ ರಿಜಿಸ್ಟ್ರಾರರು ಅಂಥ ಹೆಸರನ್ನು ರಿಜಿಸ್ಟರಿನಲ್ಲಿ ನಮೂದು ಮಾಡಿ ಆ ನಮೂದಿಗೆ ಚಿಕ್ಕ ರುಜು ಮತ್ತು ದಿನಾಂಕ ಹಾಕತಕ್ಕದ್ದು.

೧೫. ಜನನ ಮರಣಗಳ ರಿಜಿಸ್ಟರಿನಲ್ಲಿ ದಾಖಲೆಯ ತಿದ್ದುಪಡಿ ಅಥವಾ ರದ್ದಿಯಾತಿ

ಈ ಅಧಿನಿಯಮದ ಮೇರೆಗೆ ತಾನು ಇಟ್ಟಿರುವ ಯಾವುದೇ ರಿಜಿಸ್ಟರಿನಲ್ಲಿ ಒಂದು ಜನನದ ಇಲ್ಲವೇ ಮರಣದ ಯಾವುದೇ ನಮೂದು ರೂಪದಲ್ಲಾಗಲಿ ವಿಷಯದಲ್ಲಾಗಲಿ ತಪ್ಪಾಗಿದೆಯೆಂದು ಅಥವಾ ವಂಚನೆಯಿಂದ ಅಥವಾ ಅನುಚಿತವಾಗಿ ಮಾಡಲ್ಪಟ್ಟಿದೆಯೆಂದು ರಿಜಿಸ್ಟ್ರಾರರಿಗೆ ಸಮಾಧಾನವಾಗುವಂತೆ ರುಜುವಾತಾದ ಪಕ್ಷದಲ್ಲಿ ಅಂಥ ನಮೂದುಗಳನ್ನು ಯಾವ ಷರತ್ತುಗಳ ಮೇಲೆ ಮತ್ತು ಯಾವ ಸನ್ನಿವೇಶಗಳಲ್ಲಿ ತಿದ್ದಬಹುದೆಂಬ ಅಥವಾ ರದ್ದುಪಡಿಸಬಹುದೆಂಬ ವಿಚಾರದಲ್ಲಿ ರಾಜ್ಯ ಸರ್ಕಾರದವರು ರಚಿಸಬಹುದಾದಂಥ ನಿಯಮಗಳಿಗೊಳಪಟ್ಟು ಮೂಲ ನಮೂದನ್ನು ಯಾವ ರೀತಿಯಲ್ಲೂ ಬದಲಾವಣೆ ಮಾಡದೆ, ಅಂಚಿನಲ್ಲಿ ಸೂಕ್ತ ಷರಾ ಬರೆದು ಆ ತಪ್ಪನ್ನು ತಿದ್ದಬಹುದು ಅಥವಾ ನಮೂದನ್ನು ರದ್ದುಪಡಿಸಬಹುದು ಮತ್ತು ಅಂಚಿನಲ್ಲಿ ಬರೆದ ಷರಾಕ್ಕೆ ರುಜು ಹಾಕಿ ಆ ತಿದ್ದುಪಡಿಯ ಇಲ್ಲವೇ ರದ್ದಿಯಾತಿಯ ದಿನಾಂಕವನ್ನು ಬರೆಯತಕ್ಕದ್ದು.

© 2003, Directorate of Economics and Statistics, Govt. of Karnataka. All Rights Reserved.

# ಅಧ್ಯಾಯ IV

## ರಿಕಾರ್ಡುಗಳ ಮತ್ತು ಅಂಕಿ ಅಂಶಗಳ ಪಾಲನೆ.

**೧೬. <u>ರಿಜಿಸ್ಟ್ರಾರರು ರಿಜಿಸ್ಟರುಗಳನ್ನು ವಿಧಾಯಕ ಪ್ರಪತ್ರಗಳಲ್ಲಿ ಇಟ್ಟಿರತಕ್ಕದ್ದು</u>**

(೧) ಪ್ರತಿಯೊಬ್ಬ ರಿಜಿಸ್ಟ್ರಾರರು, ಯಾವ ನೋಂದಣಿ ಪ್ರದೇಶದ ಅಥವಾ ಅದರ ಯಾವ ಭಾಗದ ಸಂಬಂಧದಲ್ಲಿ ಕ್ಷೇತ್ರಾಧಿಕಾರವನ್ನು ಪ್ರಯೋಗಿಸುತ್ತಾರೋ ಆ ನೋಂದಣಿ ಪ್ರದೇಶದ ಅಥವಾ ಅದರ ಯಾವುದೇ ಭಾಗದ ಜನನ ಮರಣದ ರಿಜಿಸ್ಟರನ್ನು ವಿಧಾಯಕ ಪ್ರಪತ್ರದಲ್ಲಿ ಇಟ್ಟಿರತಕ್ಕದ್ದು.

(೨) ಮುಖ್ಯ ರಿಜಿಸ್ಟ್ರಾರರು ಕಾಲಕಾಲಕ್ಕೆ ವಿಧಾಯಕವಾಗಬಹುದಾದಂಥ ಪ್ರಪತ್ರಗಳಿಗೆ ಮತ್ತು ಸೂಚನೆಗಳಿಗೆ ಅನುಸಾರವಾಗಿ ಜನನ ಮರಣಗಳ ಸಂಬಂಧವಾದ ದಾಖಲೆಗಳನ್ನು ಮಾಡುವ ಸಲುವಾಗಿ ರಿಜಿಸ್ಟರು ಪುಸ್ತಕಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಮುದ್ರಣ ಮಾಡಿಸಿ ಒದಗಿಸುವ ಏರ್ಪಾಡು ಮಾಡತಕ್ಕದ್ದು; ಸ್ಥಳೀಯ ಭಾಷೆಯಲ್ಲಿ ಮತ್ತು ಅಂಥ ಪ್ರಪತ್ರಗಳ ಒಂದು ಪ್ರತಿಯನ್ನು ಪ್ರತಿಯೊಬ್ಬ ರಿಜಿಸ್ಟ್ರಾರನು ಕಚೇರಿಯ ಹೊರ ಬಾಗಿಲ ಮೇಲೆ ಅಥವಾ ಅದರ ಸಮೀಪ ಯಾವುದೊಂದು ಪ್ರಮುಖ ಸ್ಥಳದಲ್ಲಿ ಅಂಟಿಸತಕ್ಕದ್ದು.

**೧೭. <u>ಜನನ ಮರಣಗಳ ರಿಜಿಸ್ಟರಿನ ಶೋಧನೆ</u>**

(೧) ಶುಲ್ಕದ ಮತ್ತು ಅಂಚೆ ವೆಚ್ಚದ ಸಂದಾಯಕ್ಕೆ ಸಂಬಂಧಿಸುವ ನಿಯಮಗಳ ಸಮೇತವಾಗಿ ರಾಜ್ಯ ಸರ್ಕಾರದವರು ಈ ಕುರಿತು ರಚಿಸಬಹುದಾದ ಯಾವುದೇ ನಿಯಮಾವಳಿಗೊಳಪಟ್ಟು, ಯಾವನೇ ವ್ಯಕ್ತಿಯು

(ಎ) ಜನನ ಮರಣಗಳ ಒಂದು ರಿಜಿಸ್ಟರಿನಲ್ಲಿ ಯಾವುದೇ ದಾಖಲೆಯನ್ನು ರಿಜಿಸ್ಟ್ರಾರರಿಂದ ಶೋಧನೆ ಮಾಡಿಸಬಹುದು;

(ಬಿ) ಯಾವುದೇ ಜನನ ಅಥವಾ ಮರಣದ ಸಂಬಂಧವಾಗಿ ಅಂಥ ರಿಜಿಸ್ಟರಿನಿಂದ ಒಂದು ಉದ್ಧೃತ ಭಾಗವನ್ನು ಪಡೆಯಬಹುದು.

ಪರಂತು, ಯಾವುದೇ ಮರಣದ ಸಂಬಂಧವಾಗಿ ಯಾವುದೇ ವ್ಯಕ್ತಿಗೆ ನೀಡಿದ ಯಾವುದೇ ಉದ್ಧೃತ ಭಾಗವು ರಿಜಿಸ್ಟರಿನಲ್ಲಿ ಬರೆದ ಮರಣ ಕಾರಣ ಸಂಬಂಧವಾದ ವಿವರಗಳನ್ನು ತಿಳಿಸತಕ್ಕದ್ದಲ್ಲ.

(೨) ಈ ಪ್ರಕರಣದ ಮೇರೆಗೆ ಕೊಟ್ಟಿರುವ ಎಲ್ಲಾ ಉದ್ಧೃತ ಭಾಗಗಳು ರಿಜಿಸ್ಟ್ರಾರರಿಂದ ಅಥವಾ ೧೮೭೨ನೆಯ ಇಸವಿಯ ಸಾಕ್ಷ್ಯಾಧಿನಿಯಮದ (೧೮೭೨ನೆಯ ಇಸವಿಯ (೧)ನೆಯ ಅಧಿನಿಯಮದ) ೭೬ನೇ ಪ್ರಕರಣದಲ್ಲಿ ಉಪಬಂಧಿತವಾಗಿರುವಂತೆ ಅಂಥ ಉದ್ಧೃತ ಭಾಗಗಳನ್ನು ಕೊಡಲು ರಾಜ್ಯ ಸರ್ಕಾರದಿಂದ ಪ್ರಾಧಿಕೃತನಾದ ಇತರ ಯಾವನೊಬ್ಬ ಅಧಿಕಾರಿಯಿಂದ ಪ್ರಮಾಣೀಕೃತನಾಗತಕ್ಕದ್ದು ಮತ್ತು ಆ ದಾಖಲೆಯು ಯಾವ ಜನನಕ್ಕೆ ಇಲ್ಲವೇ ಮರಣಕ್ಕೆ ಸಂಬಂಧಿಸಿದುದೋ ಅದನ್ನು ರುಜುವಾತು ಮಾಡುವ ಉದ್ದೇಶಕ್ಕಾಗಿ ಸಾಕ್ಷ್ಯವಾಗಿ ಅಂಗೀಕಾರವಾಗತಕ್ಕದ್ದು.

**೧೮. <u>ನೋಂದಣಿ ಕಚೇರಿಗಳ ಪರಿವೀಕ್ಷಣೆ</u>**

ಜಿಲ್ಲಾ ರಿಜಿಸ್ಟ್ರಾರವರಿಂದ ನಿರ್ದಿಷ್ಟವಾಗಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಪ್ರಾಧಿಕಾರಿ ವರ್ಗದವರು ರಿಜಿಸ್ಟ್ರೇಷನ್ ಕಚೇರಿಗಳನ್ನು ಪರಿವೀಕ್ಷಿಸತಕ್ಕದ್ದು ಮತ್ತು ಅಲ್ಲಿರುವ ರಿಜಿಸ್ಟರುಗಳನ್ನು ಪರೀಕ್ಷಿಸತಕ್ಕದ್ದು.

**೧೯. <u>ರಿಜಿಸ್ಟ್ರಾರುಗಳು ಮುಖ್ಯ ರಿಜಿಸ್ಟ್ರಾರರಿಗೆ ಸಂಕಲನಕ್ಕಾಗಿ ನಿಯತಕಾಲಿಕ ವರದಿಗಳನ್ನು ಕಳುಹಿಸಿಕೊಡತಕ್ಕದ್ದು</u>**

(೧) ಪ್ರತಿಯೊಬ್ಬ ರಿಜಿಸ್ಟ್ರಾರರು ಇಟ್ಟಿರುವ ರಿಜಿಸ್ಟರಿನಲ್ಲಿ ಜನನ ಮರಣ ದಾಖಲೆಗಳ ಸಂಬಂಧವಾದ ಒಂದು ವರದಿಯನ್ನು ವಿಧಾಯಕವಾಗಬಹುದಾದಂಥ ಕಾಲಗಳಿಗೊಮ್ಮೆ ಮತ್ತು ಅಂಥ ಪ್ರಪತ್ರಗಳಲ್ಲಿ ಮುಖ್ಯ ರಿಜಿಸ್ಟ್ರಾರರಿಗೆ ಅಥವಾ ಅವರಿಂದ ನಿರ್ದಿಷ್ಟವಾಗಬಹುದಾದ ಯಾವನೊಬ್ಬ ಅಧಿಕಾರಿಗೆ ಕಳುಹಿಸತಕ್ಕದ್ದು.

(೨) ಮುಖ್ಯ ರಿಜಿಸ್ಟ್ರಾರವರು ರಿಜಿಸ್ಟ್ರಾರರಿಂದ ಒದಗಿಸಲ್ಪಟ್ಟ ವರದಿಗಳಲ್ಲಿರುವ ಮಾಹಿತಿಯ ಸಂಕಲನ ಮಾಡಿಸತಕ್ಕದ್ದು ಮತ್ತು ನೋಂದಣಿಯಾದ ಜನನ ಮರಣಗಳ ಮೇಲೆ ಅಂಕಿ ಅಂಶ ಸಂಬಂಧವಾದ ಒಂದು ವರದಿಯನ್ನು ಸಂಬಂಧಪಟ್ಟ ವರ್ಷದಲ್ಲಿ ವಿಧಾಯಕವಾಗಬಹುದಾದಂಥ ಕಾಲಗಳಿಗೊಮ್ಮೆ ಮತ್ತು ಅಂಥ ಪ್ರಪತ್ರಗಳಲ್ಲಿ ಸಾರ್ವಜನಿಕರ ತಿಳುವಳಿಕೆಗಳಿಗಾಗಿ ಪ್ರಕಟಿಸತಕ್ಕದ್ದು.

© 2003, Directorate of Economics and Statistics, Govt. of Karnataka. All Rights Reserved.

## ಅಧ್ಯಾಯ V
### ಸಂಕೀರ್ಣ

**೨೦. ಭಾರತದ ಹೊರಗಡೆ ಪ್ರಜೆಗಳ ಜನನ ಮರಣಗಳ ನೋಂದಣಿಗೆ ವಿಶೇಷ ಏರ್ಪಾಡು**

(೧) ರಿಜಿಸ್ಟ್ರಾರ್ ಜನರಲ್‌ರವರು ಈ ಕುರಿತು ಕೇಂದ್ರ ಸರ್ಕಾರದವರಿಂದ ರಚಿತವಾಗಬಹುದಾದಂಥ ನಿಯಮಗಳಿಗೊಳಪಟ್ಟು ಭಾರತದ ಹೊರಗಡೆ ಭಾರತದ ಪೌರರ ಜನನ ಮರಣಗಳ ಸಂಬಂಧವಾಗಿ ಭಾರತೀಯ ವಾಣಿಜ್ಯ ದೂತಾವಾಸಗಳಲ್ಲಿ ಅಂಥ ಪೌರರ ನೋಂದಣಿಯ ಸಂಬಂಧವಾಗಿ ೧೯೫೫ನೆಯ ಇಸವಿಯ ಪೌರತ್ವಾಧಿನಿಯಮ (೧೯೫೫ನೆಯ ಇಸವಿಯ ೭ನೆಯ ಅಧಿನಿಯಮ )ದ ಮೇರೆಗೆ ರಚಿತವಾದ ನಿಯಮಗಳ ಪ್ರಕಾರ ತಾನು ಪಡೆದ ಮಾಹಿತಿಯನ್ನು ನೋಂದಣಿ ಮಾಡಿಸತಕ್ಕದ್ದು.

(೨) ಭಾರತದಲ್ಲಿ ಜನಿಸಿದ ಯಾವ ಶಿಶುವಿನ ಸಂಬಂಧದಲ್ಲಿ (೧)ನೆಯ ಉಪ–ಪ್ರಕರಣದಲ್ಲಿ ಉಪ–ಬಂಧಿಸಿದ ಪ್ರಕಾರ ಮಾಹಿತಿ ಬಂದಿಲ್ಲವೋ ಆ ಯಾವುದೇ ಮಗುವಿನ ಸಂದರ್ಭದಲ್ಲಿ, ಆ ಶಿಶುವಿನ ಮಾತಾ ಪಿತರು ಭಾರತದಲ್ಲಿ ನೆಲಸುವ ಉದ್ದೇಶದಿಂದ ಅಲ್ಲಿಗೆ ಮರಳಿದ ಪಕ್ಷದಲ್ಲಿ, ಅವರು ಆ ಶಿಶುವು ಭಾರತಕ್ಕೆ ಆಗಮಿಸಿದ ದಿನಾಂಕದಿಂದ ೬೦ ದಿನಗಳೊಳಗಾಗಿ ಆ ಶಿಶುವು ಭಾರತದಲ್ಲಿ ಜನಿಸಿದರೆ ಹೇಗೋ ಅದೇ ರೀತಿಯಲ್ಲಿ ಶಿಶುವಿನ ಜನನವನ್ನು ಈ ಅಧಿನಿಯಮದ ಮೇರೆಗೆ ನೋಂದಣಿ ಮಾಡಿಸಬಹುದು ಮತ್ತು ೧೩ನೆಯ ಪ್ರಕರಣದ ಉಪ–ಬಂಧಗಳು ಮೇಲೆ ಹೇಳಿದ ೬೦ ದಿನಗಳ ಅವಧಿಯು ಮುಗಿದ ತರುವಾಯ ಅಂಥ ಶಿಶುವಿನ ಜನನಕ್ಕೆ ಅನ್ವಯಿಸತಕ್ಕದ್ದು.

**೨೧. ಜನನ ಅಥವಾ ಮರಣ ಸಂಬಂಧದ ಸಮಾಚಾರ ಪಡೆಯಲು ರಿಜಿಸ್ಟ್ರಾರರ ಅಧಿಕಾರ**

ಯಾವನೊಬ್ಬ ವ್ಯಕ್ತಿಯು ವಾಸವಾಗಿರುವ ಸ್ಥಳದಲ್ಲಿ ಸಂಭವಿಸಿದ ಜನನದ ಅಥವಾ ಮರಣದ ಸಂಬಂಧದಲ್ಲಿ ಆತನಿಗೆ ತಿಳಿದಿರುವ ಸಮಾಚಾರವನ್ನು ಒದಗಿಸಬೇಕೆಂಬುದಾಗಿ ರಿಜಿಸ್ಟ್ರಾರರು ಮೌಖಿಕವಾಗಿ ಇಲ್ಲವೇ ಲಿಖಿತವಾಗಿ ಆ ಯಾವನೊಬ್ಬ ವ್ಯಕ್ತಿಗೆ ವಿಧಿಸಬಹುದು.

**೨೨. ನಿರ್ದೇಶನಗಳನ್ನು ಕೊಡಲು ಅಧಿಕಾರ**

ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಅಥವಾ ಅದರ ಮೇರೆಗೆ ರಚಿತವಾದ ಯಾವುದೇ ನಿಯಮದ ಇಲ್ಲವೇ ಆದೇಶದ ಯಾವುದೇ ಉಪಬಂಧಗಳನ್ನು ರಾಜ್ಯದಲ್ಲಿ ಜಾರಿ ಮಾಡುವುದಕ್ಕೆ ಅವಶ್ಯವೆಂದು ತೋರಬಹುದಾದಂಥ ನಿರ್ದೇಶನಗಳನ್ನು ಕೇಂದ್ರ ಸರಕಾರದವರು ಯಾವುದೇ ರಾಜ್ಯ ಸರ್ಕಾರಕ್ಕೆ ಕೊಡಬಹುದು.

**೨೩. ದಂಡನೆಗಳು**

(೧) (ಎ) ೮ನೆಯ ಮತ್ತು ೯ನೆಯ ಪ್ರಕರಣಗಳ ಯಾವುದೇ ಉಪಬಂಧಗಳ ಮೇರೆಗೆ ಯಾವ ಸಮಾಚಾರವನ್ನು ಕೊಡುವುದು ತನ್ನ ಕರ್ತವ್ಯವಾಗಿದೆಯೋ ಅದನ್ನು ಕೊಡಲು ಸಮಂಜಸ ಕಾರಣವಿಲ್ಲದೇ ತಪ್ಪುವ;

(ಬಿ) ತಿಳಿದು ನೋಂದಣಿ ಮಾಡಿಸತಕ್ಕ ಯಾವುದೇ ವಿವರಗಳ ಕುರಿತು ಅಸತ್ಯವೆಂದು ತಾನು ತಿಳಿದಿರುವ ಇಲ್ಲವೇ ನಂಬುವ ಯಾವುದೇ ಸಮಾಚಾರವನ್ನು ಜನನ ಮರಣಗಳ ಯಾವುದೇ ರಿಜಿಸ್ಟರಿನಲ್ಲಿ ಸೇರಿಸುವ ಉದ್ದೇಶಕ್ಕಾಗಿ ಕೊಡುವ ಇಲ್ಲವೇ ಕೊಡಿಸುವ;

(ಸಿ) ೧೧ನೆಯ ಪ್ರಕರಣದಿಂದ ವಿಧಿಸಲಾಗಿರುವಂತೆ ರಿಜಿಸ್ಟರ್‌ನಲ್ಲಿ ತನ್ನ ಹೆಸರನ್ನು, ವಿವರಣೆಯನ್ನು ಮತ್ತು ವಾಸದ ಸ್ಥಳವನ್ನು ಬರೆಯಲು ಅಥವಾ ತನ್ನ ಹೆಬ್ಬೆಟ್ಟು ಗುರುತನ್ನು ಹಾಕಲು ನಿರಾಕರಿಸುವ ಯಾವನೇ ಒಬ್ಬ ವ್ಯಕ್ತಿಯು.

ಯಾವನೇ ವ್ಯಕ್ತಿಯು ೫೦ ರೂಪಾಯಿಯವರೆಗೆ ಹೋಗಬಹುದಾದ ದಂಡನೀಯನಾಗತಕ್ಕದ್ದು.

(೨) ತನ್ನ ಅಧಿಕಾರ ಕ್ಷೇತ್ರದಲ್ಲಿ ಸಂಭವಿಸಿದ ಯಾವುದೇ ಜನನವನ್ನು ಇಲ್ಲವೇ ಮರಣವನ್ನು ನೋಂದಣಿ ಮಾಡಲು ಅಥವಾ ೧೧ನೆಯ ಪ್ರಕರಣದ (೧) ನೆಯ ಉಪ–ಪ್ರಕರಣದಿಂದ ವಿಧಿಸಲ್ಪಟ್ಟ ಯಾವುದೇ ವರದಿಯನ್ನು ಸಲ್ಲಿಸಲು ಸಮಂಜಸ ಕಾರಣವಿಲ್ಲದೆ ಉಪೇಕ್ಷಿಸುವ ಇಲ್ಲವೇ ನಿರಾಕರಿಸುವ ಯಾವನೊಬ್ಬ ರಿಜಿಸ್ಟ್ರಾರ್ ಅಥವಾ ಸಬ್–ರಿಜಿಸ್ಟ್ರಾರ್ ೫೦ ರೂಪಾಯಿಯವರೆಗೆ ಹೋಗಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(೩) ೧೦ನೆಯ ಪ್ರಕರಣದ (೩)ನೆಯ ಉಪ–ಪ್ರಕರಣದ ಮೇರೆಗೆ ಒಂದು ಪ್ರಮಾಣ ಪತ್ರವನ್ನು ನೀಡಲು ಉಪೇಕ್ಷಿಸುವ ಅಥವಾ ನಿರಾಕರಿಸುವ ಯಾವನೊಬ್ಬ ವೈದ್ಯ ವೃತ್ತಿಕನು ಮತ್ತು ಅಂಥ ಪ್ರಮಾಣ ಪತ್ರವನ್ನು ತಲುಪಿಸಲು

© 2003, Directorate of Economics and Statistics, Govt. of Karnataka. All Rights Reserved.

ಉಪೇಕ್ಷಿಸುವ ಅಥವಾ ನಿರಾಕರಿಸುವ ಯಾವನೊಬ್ಬ ವ್ಯಕ್ತಿಯು ೫೦ ರೂಪಾಯಿಯವರೆಗೆ ಹೋಗಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(೪) ಈ ಅಧಿನಿಯಮದ ಯಾವುದೇ ಉಪ-ಬಂಧದ ಉಲ್ಲಂಘನೆಗೆ ಈ ಪ್ರಕರಣದಲ್ಲಿ ಯಾವ ದಂಡನೆಗೂ ಅವಕಾಶ ಮಾಡಿಲ್ಲವೋ ಆ ಯಾವುದೇ ಉಪ-ಬಂಧವನ್ನು ಸಮಂಜಸ ಕಾರಣವಿಲ್ಲದೆ ಉಲ್ಲಂಘಿಸುವ ಯಾವನೊಬ್ಬ ವ್ಯಕ್ತಿಯು ೧೦ ರೂಪಾಯಿಯವರೆಗೆ ಹೋಗಬಹುದಾದಂಥ ದಂಡನೆಯಿಂದ ದಂಡನೀಯನಾಗತಕ್ಕದ್ದು.

(೫) ೧೯೭೩ನೆಯ ಇಸವಿಯ ದಂಡ ಪ್ರಕ್ರಿಯಾ ಸಂಹಿತೆಯಲ್ಲಿ (೧೯೭೩ನೆಯ ಇಸವಿಯ ೫ನೆಯ ಅಧಿನಿಯಮದಲ್ಲಿ )ಏನೇ ಅಡಕವಾಗಿದ್ದರೂ ಸರಿಯೇ, ಈ ಪ್ರಕರಣದ ಮೇರೆಗಿನ ಒಂದು ಅಪರಾಧದ ವಿಚಾರವಾಗಿ ಒಬ್ಬ ದಂಡಾಧಿಕಾರಿಯಿಂದ ಕ್ಷಿಪ್ರ ವಿಚಾರಣೆ ನಡೆಸಲ್ಪಡತಕ್ಕದ್ದು.

**೨೪. <u>ಅಪರಾಧಗಳ ಅಧಿಸಂಧಾನಕ್ಕೆ ಅಧಿಕಾರ</u>**

(೧) ವಿಧಾಯಕವಾಗಬಹುದಾದಂಥ ಷರತ್ತುಗಳಿಗೊಳಪಟ್ಟು, ಈ ಕುರಿತು ಸಾಮಾನ್ಯ ಅಥವಾ ವಿಶಿಷ್ಟ ಆದೇಶದ ಮೂಲಕ ಮುಖ್ಯ ರಿಜಿಸ್ಟ್ರಾರರಿಂದ ಅಧಿಕೃತನಾದ ಯಾವನೊಬ್ಬ ಅಧಿಕಾರಿಯು, ಈ ಅಧಿನಿಯಮದ ಮೇರೆಗೆ ದಂಡ ಕಾರ್ಯವಾಹಿಗಳನ್ನು ಹೂಡುವುದಕ್ಕೆ ಮುಂಚಿತವಾಗಿ ಇಲ್ಲವೇ ತರುವಾಯ, ಈ ಅಧಿನಿಯಮದ ಮೇರೆಗೆ ಒಂದು ಅಪರಾಧವನ್ನು ಮಾಡಿದ ಅಥವಾ ಸಯುಕ್ತಿಕವಾಗಿ ಶಂಕಿಸಲ್ಪಟ್ಟ ವ್ಯಕ್ತಿಯಿಂದ, ಅಂಥ ಅಪರಾಧದ ಅಭಿಸಂಧಾನ ರೂಪವಾಗಿ ೫೦ ರೂಪಾಯಿಗೆ ಮೀರದ ಮೊತ್ತದ ಹಣವನ್ನು ಸ್ವೀಕರಿಸಬಹುದು.

(೨) ಅಷ್ಟು ಮೊತ್ತದ ಹಣವು ಸಂದಾಯವಾದ ಮೇಲೆ, ಅಂಥ ವ್ಯಕ್ತಿಯು ವಿಮೋಚಿತನಾಗತಕ್ಕದ್ದು ಮತ್ತು ಅಂಥ ಅಪರಾಧದ ಸಂಬಂಧದಲ್ಲಿ ಅವನ ಮೇಲೆ ಮುಂದೇನೂ ಕಾರ್ಯವಾಹಿಗಳನ್ನು ಕೈಕೊಳ್ಳತಕ್ಕದ್ದಲ್ಲ.

**೨೫. <u>ಫಿರ್ಯಾದಿ ವ್ಯವಹರಣೆಗೆ ಮಂಜೂರಾತಿ</u>**

ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧದ ಬಗ್ಗೆ ಈ ಕುರಿತು ಸಾಮಾನ್ಯ ಇಲ್ಲವೇ ವಿಶಿಷ್ಟ ಆದೇಶದ ಮೂಲಕ ಮುಖ್ಯ ರಿಜಿಸ್ಟ್ರಾರರಿಂದ ಅಧಿಕೃತನಾದ ಅಧಿಕಾರದಿಂದ ಹೊರತು, ಯಾವುದೇ ಫಿರ್ಯಾದಿ ವ್ಯವಹರಣೆ ಹೂಡಲ್ಪಡತಕ್ಕದ್ದಲ್ಲ.

**೨೬. <u>ರಿಜಿಸ್ಟ್ರಾರರುಗಳು ಮತ್ತು ಸಬ್-ರಿಜಿಸ್ಟ್ರಾರರುಗಳು ಸರ್ಕಾರಿ ನೌಕರರೆಂದು ಪರಿಗಣಿತರಾಗತಕ್ಕದ್ದು</u>**

ಎಲ್ಲ ರಿಜಿಸ್ಟ್ರಾರರುಗಳು ಮತ್ತು ಸಬ್-ರಿಜಿಸ್ಟ್ರಾರರುಗಳು ಈ ಅಧಿನಿಯಮದ ಅಥವಾ ಅದರ ಮೇಲೆ ರಚಿತವಾದ ಯಾವುದೇ ನಿಯಮದ ಅಥವಾ ಆದೇಶದ ಉಪ-ಬಂಧಗಳಿಗನುಸಾರವಾಗಿ ವರ್ತಿಸುವಾಗ ಇಲ್ಲವೇ ವರ್ತಿಸುವಂತೆ ಭಾಸವಾಗುವಾಗ ಭಾರತ ದಂಡ ಸಂಹಿತೆಯ (೧೮೬೦ನೆಯ ಇಸವಿಯ ೪ನೆಯ ಅಧಿನಿಯಮದ) ೨೧ನೆಯ ಪ್ರಕರಣದ ಅರ್ಥದ ಪ್ರಕಾರ ಸರ್ಕಾರೀ ನೌಕರರೆಂದು ಪರಿಗಣಿತರಾಗತಕ್ಕದ್ದು.

**೨೭. <u>ಅಧಿಕಾರಿಗಳ ಪ್ರತ್ಯಾಯೋಜನೆ</u>**

ರಾಜ್ಯ ಸರ್ಕಾರದವರು (೩೦ನೆಯ ಪ್ರಕರಣದ ಮೇರೆಗೆ ನಿಯಮಗಳನ್ನು ರಚಿಸುವ ಅಧಿಕಾರದ ಹೊರತು) ಈ ಅಧಿನಿಯಮದ ಪ್ರಕಾರ ಅಥವಾ ಇದರ ಮೇಲೆ ರಚಿತವಾದ ನಿಯಮಗಳ ಪ್ರಕಾರ ತನ್ನಿಂದ ಪ್ರಯೋಜ್ಯವಾಗುವ ಯಾವುದೇ ಅಧಿಕಾರವು, ನಿರ್ದೇಶನದಲ್ಲಿ ನಿರ್ದಿಷ್ಟವಾಗಬಹುದಾದಂಥ ಷರತ್ತುಗಳೇನಾದರೂ ಇದ್ದರೆ ಅವುಗಳಿಗೊಳಪಟ್ಟು ರಾಜ್ಯ ಸರ್ಕಾರಕ್ಕೆ ಅಧೀನವಾಗಿದ್ದು ನಿರ್ದೇಶನದಲ್ಲಿ ನಿರ್ದಿಷ್ಟವಾಗಬಹುದಾದಂಥ ಅಧಿಕಾರಿಯಿಂದ ಇಲ್ಲವೇ ಪ್ರಾಧಿಕಾರಿ ವರ್ಗದಿಂದ ಸಹ ಪ್ರಯೋಜ್ಯವಾಗತಕ್ಕುದೆಂದು ರಾಜ್ಯಪತ್ರದಲ್ಲಿ ಅಧಿಸೂಚನೆ ಕೊಟ್ಟು ನಿರ್ದೇಶಿಸಬಹುದು.

**೨೮. <u>ಸದ್ಭಾವದಿಂದ ಮಾಡಿದ ಕೃತ್ಯದ ರಕ್ಷಣೆ</u>**

(೧) ಈ ಅಧಿನಿಯಮದ ಮೇರೆಗೆ ಅಥವಾ ಇದರ ಮೇಲೆ ರಚಿತವಾದ ಯಾವುದೇ ನಿಯಮದ ಇಲ್ಲವೇ ಆದೇಶದ ಮೇರೆಗೆ ಸದ್ಭಾವದಿಂದ ಮಾಡಲ್ಪಟ್ಟ ಅಥವಾ ಮಾಡಲು ಉದ್ದೇಶಿಸಲ್ಪಟ್ಟ ಯಾವುದೇ ಕೃತ್ಯದ ಬಗ್ಗೆ ಸರ್ಕಾರದ, ರಿಜಿಸ್ಟ್ರಾರ್ ಜನರಲ್‌ರವರು, ಯಾವೊಬ್ಬ ರಿಜಿಸ್ಟ್ರಾರ್ ಅಥವಾ ಈ ಅಧಿನಿಯಮದ ಮೇರೆಗೆ ಯಾವುದೇ ಅಧಿಕಾರವನ್ನು ಪ್ರಯೋಗಿಸುವ ಅಥವ ಯಾವುದೇ ಕರ್ತವ್ಯವನ್ನು ನಿರ್ವಹಿಸುವ ಯಾವನೇ ವ್ಯಕ್ತಿಯಮೇಲೆ ಯಾವುದೇ ದಾವೆಯನ್ನಾಗಲಿ, ಫಿರ್ಯಾದಿ ವ್ಯವಹರಣೆಯನ್ನಾಗಲಿ ಅಥವಾ ಇತರ ವಿಧಿಕಾರ್ಯವಾಹಿಯನ್ನಾಗಲಿ ಹೂಡಲು ಅವಕಾಶವಿರತಕ್ಕದ್ದಲ್ಲ.

(೨) ಈ ಅಧಿನಿಯಮದ ಅಥವಾ ಅದರ ಮೇಲೆ ರಚಿತವಾದ ನಿಯಮದ ಅಥವಾ ಆದೇಶದ ಮೇರೆಗೆ ಸದ್ಭಾವದಿಂದ ಮಾಡಲ್ಪಟ್ಟ ಇಲ್ಲವೇ ಮಾಡಲು ಉದ್ದೇಶಿಸಲ್ಪಟ್ಟ ಯಾವುದೇ ಕೃತ್ಯದಿಂದ ಉಂಟಾದ ಇಲ್ಲವೇ ಉಂಟಾಗಬಹುದಾದ

© 2003, Directorate of Economics and Statistics, Govt. of Karnataka. All Rights Reserved.

ಯಾವುದೇ ಹಾನಿಯ ಬಗ್ಗೆ ಸರ್ಕಾರದ ಮೇಲೆ ಯಾವುದೇ ದಾವೆಯನ್ನು ಇಲ್ಲವೇ ಇತರ ವಿಧಿಕಾರ್ಯವಾಹಿಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

೨೯. <u>ಈ ಅಧಿನಿಯಮವು ೧೮೮೬ನೆಯ ಇಸವಿಯ ೬ನೆಯ ಅಧಿನಿಯಮಕ್ಕೆ ಭಂಗ ಉಂಟು ಮಾಡತಕ್ಕದ್ದಲ್ಲ</u> ೧೮೮೬ನೆಯ ಇಸವಿಯ ಜನನಗಳ, ಮರಣಗಳ ಮತ್ತು ವಿವಾಹಗಳ ನೋಂದಣಿಯ ಅಧಿನಿಯಮದ ಉಪ-ಬಂಧುಗಳಿಗೆ ಈ ಅಧಿನಿಯಮದಲ್ಲಿರುವ ಯಾವುದೇ ವಿಷಯವು ಭಂಗವುಂಟು ಮಾಡುವುದಾಗಿ ಅರ್ಥ ಮಾಡತಕ್ಕದ್ದಲ್ಲ.

೩೦. <u>ನಿಯಮಗಳನ್ನು ರಚಿಸುವ ಅಧಿಕಾರ</u>

(೧) ರಾಜ್ಯ ಸರ್ಕಾರದವರು, ಕೇಂದ್ರ ಸರ್ಕಾರದವರ ಅನುಮೋದನೆ ಪಡೆದು ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆ ಕೊಟ್ಟು ಈ ಅಧಿನಿಯಮದ ಉದ್ದೇಶವನ್ನು ಈಡೇರಿಸಲು ನಿಯಮಗಳನ್ನು ರಚಿಸಬಹುದು.

(೨) ಮುಖ್ಯವಾಗಿ, ಮತ್ತು ಪೂರ್ವೋಕ್ತ ಉಪ-ಬಂಧದ ಸಮನ್ವಯಕ್ಕೆ ಪ್ರತಿಕೂಲವಾಗದಂತೆ, ಅಂಥ ನಿಯಮಗಳಲ್ಲಿ:-

(ಎ) ಈ ಅಧಿನಿಯಮದ ಮೇರೆಗೆ ಇಟ್ಟಿರಬೇಕಾದ ಜನನ ಮರಣದ ರಿಜಿಸ್ಟರುಗಳ ಪ್ರಪತ್ರಗಳು;

(ಬಿ) ೮ನೆಯ ಪ್ರಕರಣದ ಮೇರೆಗೆ ರಿಜಿಸ್ಟ್ರಾರವರಿಗೆ ಯಾವ ಕಾಲಾವಧಿಗಳೊಳಗೆ ಮತ್ತು ಯಾವ ಪ್ರಪತ್ರಗಳಲ್ಲಿ ಮತ್ತು ಯಾವ ರೀತಿಯಲ್ಲಿ ಸಮಾಚಾರ ಕೊಡತಕ್ಕದ್ದೆಂಬ ವಿಚಾರ;

(ಸಿ) ೧೧ನೆಯ ಪ್ರಕರಣದ (೧)ನೆಯ ಉಪ-ಪ್ರಕರಣದ ಮೇರೆಗೆ ಜನನ ಮರಣಗಳನ್ನು ಅಧಿಸೂಚಿಸತಕ್ಕ ಕಾಲಾವಧಿ ಮತ್ತು ರೀತಿ;

(ಡಿ) ಮರಣ ಕಾರಣದ ಬಗ್ಗೆ ಯಾವ ವ್ಯಕ್ತಿಯಿಂದ ಮತ್ತು ಯಾವ ಪ್ರಪತ್ರಗಳಲ್ಲಿ ಪ್ರಮಾಣ ಪತ್ರ ಪಡೆಯತಕ್ಕದ್ದೆಂಬ ವಿಚಾರ;

(ಇ) ಯಾವ ಉದ್ಧೃತ ಭಾಗದ ವಿವರಗಳನ್ನು ೧೨ನೆಯ ಪ್ರಕರಣದ ಮೇರೆಗೆ ಕೊಡಬಹುದೆಂಬ ವಿಚಾರ;

(ಎಫ್) ೧೩ನೆಯ ಪ್ರಕರಣದ (೨)ನೆಯ ಉಪ ಪ್ರಕರಣದ ಮೇರೆಗೆ ಒಂದು ಜನನವನ್ನು ಇಲ್ಲವೇ ಮರಣವನ್ನು ನೋಂದಣಿ ಮಾಡಿಸಲು ಯಾವ ಅಧಿಕಾರಿ ವರ್ಗವು ಅನುಮತಿ ಕೊಡಬಹುದೆಂಬ ವಿಚಾರ;

(ಜಿ) ೧೩ನೆಯ ಪ್ರಕರಣದ ಮೇರೆಗೆ ಮಾಡಿದ ನೋಂದಣಿಯ ಬಗ್ಗೆ ಸಂದಾಯವಾಗತಕ್ಕ ಶುಲ್ಕ;

(ಹೆಚ್) ೪ನೆಯ ಪ್ರಕರಣದ (೪)ನೆಯ ಉಪ-ಪ್ರಕರಣದ ಮೇರೆಗೆ ಮುಖ್ಯ ರಿಜಿಸ್ಟ್ರಾರವರಿಂದ ವರದಿಗಳ ಸಲ್ಲಿಕೆ;

(ಐ) ಜನನ ಮರಣ ರಿಜಿಸ್ಟರುಗಳ ಶೋಧನೆ ಮತ್ತು ಅಂಥ ಶೋಧನೆಯ ಬಗೆಗೂ, ರಿಜಿಸ್ಟರುಗಳಿಂದ ಉದ್ಧೃತಭಾಗಗಳನ್ನು ಕೊಡುವ ಬಗೆಗೂ, ಸಂದಾಯವಾಗತಕ್ಕ ಶುಲ್ಕ;

(ಜೆ) ೧೯ನೆಯ ಪ್ರಕರಣದ ಮೇರೆಗೆ ವರದಿಗಳನ್ನು ಮತ್ತು ಅಂಕಿ ಅಂಶದ ವರದಿಯನ್ನು ಯಾವ ಪ್ರಪತ್ರಗಳಲ್ಲಿ ಮತ್ತು ಯಾವ ಕಾಲಾವಧಿಗಳಿಗೊಮ್ಮೆ ಒದಗಿಸಿ ಪ್ರಕಟಿಸತಕ್ಕದ್ದೆಂಬ ವಿಚಾರ;

(ಕೆ) ರಿಜಿಸ್ಟ್ರಾರರು ಇಟ್ಟಿರತಕ್ಕ ರಿಜಿಸ್ಟರುಗಳ ಮತ್ತು ಇತರ ರಿಕಾರ್ಡುಗಳ ಅಭಿರಕ್ಷೆ. ಹಾಜರಾತಿ ಮತ್ತು ವರ್ಗಾವಣೆ;

(ಎಲ್) ಜನನ ಮರಣಗಳ ರಿಜಿಸ್ಟರಿನಲ್ಲಿರುವ ದೋಷಗಳ ತಿದ್ದುಪಡಿ ಮತ್ತು ಅವುಗಳಲ್ಲಿರುವ ದಾಖಲೆಗಳ ರದ್ದಿಯಾತಿ:

(ಎಂ) ವಿಧಾಯಕವಾಗಬೇಕಾದ ಅಥವಾ ವಿಧಾಯಕವಾಗಬಹುದಾದ ಇತರ ಯಾವುದೇ ವಿಷಯ;

[1][(3) ಈ ಅಧಿನಿಯಮದಡಿ ರಚಿಸಲಾದ ಪ್ರತಿಯೊಂದು ನಿಯಮಗಳನ್ನು, ಅವು ರಚಿತವಾದ ತಕ್ಷಣ ರಾಜ್ಯ ವಿಧಾನ ಮಂಡಲದಲ್ಲಿ ಮಂಡಿಸ ತಕ್ಕದ್ದು.]

೩೧. <u>ನಿರಸನ ಮತ್ತು ಯಾವೃತಿ</u>

(೧) ೨೯ನೆಯ ಪ್ರಕರಣದ ಉಪಬಂಧಗಳಿಗೊಳಪಟ್ಟು, ಯಾವುದೇ ರಾಜ್ಯದಲ್ಲಿ ಅಥವಾ ಅದರ ಭಾಗದಲ್ಲಿ ಈ ಅಧಿನಿಯಮವು ಸಲುವಳಿಗೆ ಬಂದಂದಿನಿಂದ ಅಲ್ಲಿ ಸಲುವಳಿಯಲ್ಲಿರುವ ಯಾವುದೇ ವಿಧಿಯ ಪೈಕಿ ಈ ಅಧಿನಿಯಮದಲ್ಲಿ ಸಮಾವೇಶವಾದ ವಿಷಯಗಳಿಗೆ ಸಂಬಂಧಿಸುವಂಥ ಭಾಗವು ಅಂಥ ರಾಜ್ಯದಲ್ಲಿ ಇಲ್ಲವೇ ಸಂದರ್ಭಾನುಸಾರ ಅಂಥ ಭಾಗದಲ್ಲಿ ನಿರಸಿತವಾಗತಕ್ಕದ್ದು.

(೨) ಹಾಗೆ ನಿರಸಿತವಾಗಿದ್ದರೂ ಸಹ, ಅಂಥ ಯವುದೇ ವಿಧಿಯ ಮೇರೆಗೆ (ಹೊರಡಿಸಿದ ಯಾವುದೇ ಸೂಚನೆ ಇಲ್ಲವೆ ನಿರ್ದೇಶನದ ರಚಿಸಿದ ಯಾವುದೇ ಕಾಯಿದೆ ಇಲ್ಲವೇ ನಿಯಮ ಇಲ್ಲವೇ ಆದೇಶಗಳ ಸಮೇತವಾಗಿ) ಮಾಡಿದ ಯಾವುದೇ ಕೃತ್ಯ ಇಲ್ಲವೇ ಕೈಕೊಂಡ ಯಾವುದೇ ಕ್ರಮವು, ಈ ಅಧಿನಿಯಮದ ಉಪಬಂಧಗಳಿಗೆ ವಿಸಂಗತವಾಗದಿರುವಷ್ಟರವರೆಗೆ, ಅಂಥ ಯಾವುದೇ ಕೃತ್ಯ ಇಲ್ಲವೇ ಕ್ರಮವು, ಮಾಡಲ್ಪಟ್ಟಾಗ ಇಲ್ಲವೇ ಕೈಕೊಳ್ಳಲ್ಪಟ್ಟಾಗ ಪೂರ್ವೋಕ್ತ ಉಪಬಂಧಗಳು ಸಲುವಳಿಯಲ್ಲಿಲ್ಲದಿದ್ದರೆ ಹೇಗೊ ಹಾಗೆಯೇ ಅವುಗಳ ಮೇರೆಗೆ

© 2003, Directorate of Economics and Statistics, Govt. of Karnataka. All Rights Reserved.

ಅಂಥ ಕೃತ್ಯ ಇಲ್ಲವೇ ಕ್ರಮವು ಮಾಡಲ್ಪಟ್ಟಿರುವಂತೆ ಇಲ್ಲವೇ ಕೈಕೊಳ್ಳಲ್ಪಟ್ಟಿರುವಂತೆ ಭಾವಿಸಲ್ಪಡತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಮಾಡಲ್ಪಟ್ಟ ಯಾವುದೇ ಕೃತ್ಯ ಇಲ್ಲವೇ ಕೈಕೊಳ್ಳಲ್ಪಟ್ಟ ಯಾವುದೇ ಕ್ರಮದ ಮೂಲಕ ರದ್ದುಗೊಳಿಸಲ್ಪಡುವವರೆಗೆ ತದನುಸಾರವಾಗಿ ಸಲುವಳಿಯಲ್ಲಿ ಮುಂದುವರಿಯತಕ್ಕದ್ದು.

೩೨. <u>ತೊಂದರೆಯನ್ನು ನಿವಾರಿಸಲು ಅಧಿಕಾರ</u>

ಒಂದು ರಾಜ್ಯದಲ್ಲಿ ಈ ಅಧಿನಿಯಮದ ಉಪಬಂಧಗಳನ್ನು ಯಾವುದೇ ಪ್ರದೇಶಕ್ಕೆ ಅನ್ವಯಿಸಿ ಅವುಗಳನ್ನು ಪರಿಣಾಮಕ್ಕೆ ತರುವಲ್ಲಿ ಯಾವುದೇ ತೊಂದರೆಯು ತಲೆದೋರಿದ ಪಕ್ಷದಲ್ಲಿ, ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದ ಅನುಮೋದನೆ ಪಡೆದು ಈ ಅಧಿನಿಯಮದ ಉಪಬಂಧಗಳಿಗೆ ವಿಸಂಗತವಾಗದಂತೆ ಯಾವುದೇ ಪ್ರದೇಶದಲ್ಲಿ ಆ ತೊಂದರೆಯನ್ನು ನಿವಾರಿಸುವ ಬಗ್ಗೆ ಅವಶ್ಯವೆಂದು ಇಲ್ಲವೇ ಯುಕ್ತವೆಂದು ಆ ರಾಜ್ಯ ಸರ್ಕಾರದವರಿಗೆ ಕಂಡುಬರುವಂಥ ಉಪಬಂಧಗಳನ್ನು ಕೊಡಬಹುದು ಅಥವಾ ಅಂಥ ನಿರ್ದೇಶನಗಳನ್ನು ಕೊಡಬಹುದು:

ಪರಂತು, ಯಾವುದೇ ರಾಜ್ಯದ ಯಾವುದೇ ಪ್ರದೇಶದಲ್ಲಿ ಈ ಅಧಿನಿಯಮವು ಸಲುವಳಿಗೆ ಬಂದ ದಿನಾಂಕದಿಂದ ಎರಡು ವರ್ಷಗಳು ಸಮಾಪ್ತವಾದ ತರುವಾಯ ಆ ಪ್ರದೇಶದ ಸಂಬಂಧದಲ್ಲಿ ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಕೊಡತಕ್ಕದ್ದಲ್ಲ.

ಯನ್.ಡಿ.ಪಿ.ನಂಬೂದ್ರಿಪಾಡ್,

ಭಾರತ ಸರ್ಕಾರದ ಸಹ-ಕಾರ್ಯದರ್ಶಿ.

---

1. ೧೯೮೬ರ ಅಧಿನಿಯಮ ೪ನ್ನು ಅಳವಡಿಸಿ ಪ್ರಕರಣ ೨ ಮತ್ತು ಅನುಬಂಧವನ್ನು ದಿನಾಂಕ ೧೫-೫-೧೯೮೬ರಿಂದ ಜಾರಿಗೊಳಿಸಿದೆ.

© 2003, Directorate of Economics and Statistics, Govt. of Karnataka. All Rights Reserved.

# ಕರ್ನಾಟಕ ಜನನ ಮರಣಗಳ ನೋಂದಣಿಯ ನಿಯಮಗಳು, 1999

© 2003, Directorate of Economics and Statistics, Govt. of Karnataka. All Rights Reserved.

# ಅನುಬಂಧ II

## ಕರ್ನಾಟಕ ಸರ್ಕಾರ

ಸಂ. ಪಿಡಿಎಸ್ 208 ಎಸ್ಎಮ್ಸಿ 99 ಬೆಂಗಳೂರು, ದಿನಾಂಕ : 30/12/1999

ಅಧಿಸೂಚನೆ

1969ನೇ ಇಸವಿಯ ಜನನ ಮರಣಗಳ ನೋಂದಣಿ ಅಧಿನಿಯಮದ (1969ರ 18ನೇ) 30ನೆಯ ಪ್ರಕರಣದಿಂದ ದತ್ತವಾದ ಅಧಿಕಾರವನ್ನು ಪ್ರಯೋಗಿಸಿ, ಕರ್ನಾಟಕ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದ ಅನುಮೋದನೆ ಪಡೆದು ಈ ಮೂಲಕ ಈ ಮುಂದಿನ ನಿಯಮಗಳನ್ನು ಮಾಡಿದೆ; ಅಂದರೆ:–

**1. ಸಂಕ್ಷಿಪ್ತ ಶೀರ್ಷಿಕೆ ಹಾಗೂ ಪ್ರಾರಂಭ :**

(1) ಈ ನಿಯಮಗಳನ್ನು, ಕರ್ನಾಟಕ ಜನನ ಮರಣಗಳ ನೋಂದಣಿ ನಿಯಮಗಳು, 1999 ಎಂದು ಕರೆಯಬಹುದು.

(2) ಈ ನಿಯಮಗಳು ಜನವರಿ 2000ದ ಮೊದಲನೆಯ ದಿನದಿಂದ ಜಾರಿಗೆ ಬರತಕ್ಕದ್ದು.

**2. ಅರ್ಥ ವಿವರಣೆಗಳು :** ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,

(ಎ) ''ಅಧಿನಿಯಮ'' ಎಂದರೆ, 1969ನೆಯ ಇಸವಿಯ ಜನನ, ಮರಣಗಳ ನೋಂದಣಿ ಅಧಿನಿಯಮ.

(ಬಿ) ''ಪ್ರಪತ್ರ'' ಎಂದರೆ, ಈ ನಿಯಮಗಳಿಗೆ ಅನುಬಂಧಿಸಿದ ಪ್ರಪತ್ರ.

(ಸಿ) ''ಪ್ರಕರಣ'' ಎಂದರೆ, ಅಧಿನಿಯಮದ ಒಂದು ಪ್ರಕರಣ.

**3. ಗರ್ಭಾವಸ್ಥೆಯ ಕಾಲಾವಧಿ:** (2)ನೆಯ ಪ್ರಕರಣದ (1)ನೆಯ ಉಪ ಪ್ರಕರಣದ (ಜಿ) ಖಂಡದ ಉದ್ದೇಶಕ್ಕಾಗಿ ಗರ್ಭಾವಸ್ಥೆಯ ಕಾಲಾವಧಿಯು ಇಪ್ಪತ್ತೆಂಟು ವಾರಗಳಾಗಿರತಕ್ಕದ್ದು.

**4. 4ನೆಯ ಪ್ರಕರಣದ ಮೇರೆಗೆ ವರದಿಯ ಸಲ್ಲಿಸುವಿಕೆ:** 4ನೆಯ ಪ್ರಕರಣದ (4)ನೆಯ ಉಪ–ಪ್ರಕರಣದ ಮೇರೆಗೆ ವರದಿಯನ್ನು ಈ ನಿಯಮಗಳಿಗೆ ಸೇರಿಸಲ್ಪಟ್ಟ ನಿಗದಿತ ಪ್ರಪತ್ರ–ಎ ಯಲ್ಲಿ ತಯಾರಿಸತಕ್ಕದ್ದು ಮತ್ತು ಯಾವ ವರ್ಷಕ್ಕೆ ವರದಿಯು ಸಂಬಂಧಪಡುತ್ತದೋ, ಅದರ ಮುಂದಿನ ವರ್ಷದ ಜುಲೈ 31ನೆಯ ದಿನಾಂಕದೊಳಗೆ, ಪ್ರತಿ ವರ್ಷವೂ, 19ನೆಯ ಪ್ರಕರಣದ (2) ನೆಯ ಉಪ–ಪ್ರಕರಣದಲ್ಲಿ ಉಲ್ಲೇಖಿಸಿದ ಅಂಕಿ–ಅಂಶಗಳ ವರದಿಯೊಡನೆ ಮುಖ್ಯ ನೋಂದಣಾಧಿಕಾರಿಗಳು ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

**5. ಜನನ ಮತ್ತು ಮರಣಗಳ ಮಾಹಿತಿ ಕೊಡುವ ಪ್ರಪತ್ರ, ಇತ್ಯಾದಿಗಳು:**

(1) ಸಂದರ್ಭಾನುಸಾರ 8ನೆಯ ಅಥವಾ 9ನೆಯ ಪ್ರಕರಣದ ಮೇರೆಗೆ ನೋಂದಣಿಯಾದ ಜನನ, ಮರಣ ಮತ್ತು ನಿರ್ಜೀವ ಜನನಗಳಿಗೆ ನೋಂದಣಿದಾರರಿಗೆ ನೀಡಬೇಕಾದ ಮಾಹಿತಿಯು ಕ್ರಮವಾಗಿ ನಮೂನೆ 1,2 ಮತ್ತು 3ರಲ್ಲಿ ಇರತಕ್ಕದ್ದು. ಇನ್ನು ಮುಂದೆ ಇವುಗಳನ್ನು ಒಟ್ಟಾಗಿ, ವರದಿ ಮಾಡುವ ನಮೂನೆಗಳೆಂದು ಕರೆಯಬೇಕು. ಮಾಹಿತಿಯನ್ನು ಮೌಖಿಕವಾಗಿ ನೀಡಿದ ಪಕ್ಷದಲ್ಲಿ, ನೋಂದಣಿದಾರರು ವರದಿ ಮಾಡುವ ಸೂಕ್ತ ನಮೂನೆಗಳಲ್ಲಿ ನಮೂದಿಸಬೇಕು ಮತ್ತು ವರದಿಗಾರರ ಸಹಿ/ಹೆಬ್ಬೆಟ್ಟಿನ ಗುರುತನ್ನು ಪಡೆಯಬೇಕು.

(2) ವರದಿ ನಮೂನೆಗಳಲ್ಲಿ ಇರುವ ಕಾನೂನು ಮಾಹಿತಿ ಭಾಗವನ್ನು 'ಕಾನೂನು ಭಾಗ ' ವೆಂದೂ, ಸಾಂಖ್ಯಿಕ ಮಾಹಿತಿ ಭಾಗವನ್ನು ' ಸಾಂಖ್ಯಿಕ ಭಾಗ' ವೆಂದೂ ಕರೆಯಬೇಕು.

(3) ಉಪ–ನಿಯಮ (1)ರಲ್ಲಿ ಸೂಚಿಸಿರುವ ಮಾಹಿತಿಯನ್ನು ಸಂದರ್ಭಾನುಸಾರ ಜನನ, ಮರಣ ಮತ್ತು ನಿರ್ಜೀವ ಜನನ ಘಟಿಸಿದ ಇಪ್ಪತ್ತೊಂದು ದಿನಗಳೊಳಗಾಗಿ ಕೊಡುವುದು.

© 2003, Directorate of Economics and Statistics, Govt. of Karnataka. All Rights Reserved.

**6.** **ವಾಹನಗಳಲ್ಲಾದ ಜನನ ಅಥವಾ ಮರಣ:**

(1) ಚಲಿಸುತ್ತಿರುವ ಯಾವುದೇ ವಾಹನದಲ್ಲಿ ಸಂಭವಿಸುವ ಜನನ ಅಥವಾ ಮರಣದ ಸಂದರ್ಭದಲ್ಲಿ, ವಾಹನದ ಪ್ರಭಾರ ಹೊಂದಿರುವ ವ್ಯಕ್ತಿಯು, ವಾಹನವು(ಘಟನೆಯಾದ ನಂತರ) ನಿಲ್ಲುವ ಮೊದಲನೆಯ ಸ್ಥಳದಲ್ಲಿ, 8ನೆಯ ಪ್ರಕರಣದ (1)ನೆಯ ಉಪ–ಪ್ರಕರಣದ ಮೇರೆಗೆ ವಿವರಣೆಯನ್ನು ಕೂಡಲೇ ಕೊಡತಕ್ಕದ್ದು ಅಥವಾ ಕೊಡುವಂತೆ ಮಾಡತಕ್ಕದ್ದು.

**ವಿವರಣೆ:–** ಈ ನಿಯಮದ ಉದ್ದೇಶಕ್ಕಾಗಿ, "ವಾಹನ" ಎಂದರೆ, ಭೂಮಿ, ವಾಯು ಅಥವಾ ನೀರಿನ ಮೇಲೆ ಉಪಯೋಗಿಸುವ ಯಾವುದೇ ರೀತಿಯ ವಾಹನ ಎಂದು ಅರ್ಥ ಮತ್ತು ಇದರಲ್ಲಿ ವಿಮಾನ, ದೋಣಿ, ಹಡಗು, ರೈಲು ಗಾಡಿ, ಮೋಟಾರು ಕಾರು, ಮೋಟಾರು ಬೈಸಿಕಲ್, ಗಾಡಿ, ಟಾಂಗ ಮತ್ತು ರಿಕ್ಷಾ ಸೇರುತ್ತವೆ.

(2) 8ನೆಯ ಪ್ರಕರಣದ (1)ನೆಯ ಉಪ–ಪ್ರಕರಣದ (ಎ) ಇಂದ (ಇ) ವರೆಗಿನ ಕಲಂಗಳಿಗೆ ಒಳಪಡದೆ ಸಂಭವಿಸಿದ ಮರಣದ ಸಂಬಂಧದಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆಯೋ, ಅಂತಹ ಸಂದರ್ಭದಲ್ಲಿ, ಮರಣೋತ್ತರ ಪರೀಕ್ಷೆ ನಡೆಸುವ ಅಧಿಕಾರಿಯು, 8ನೆಯ ಪ್ರಕರಣದ (1)ನೆಯ ಉಪ–ಪ್ರಕರಣದ ಮೇರೆಗೆ ವಿವರಣೆಯನ್ನು ಕೊಡತಕ್ಕದ್ದು ಅಥವಾ ಕೊಡುವಂತೆ ಮಾಡತಕ್ಕದ್ದು.

**7.** **10ನೆಯ ಪ್ರಕರಣದ ಮೇರೆಗೆ ಪ್ರಮಾಣ ಪತ್ರದ ಪ್ರಪತ್ರ:** 10ನೆಯ ಪ್ರಕರಣದ (3)ನೆಯ ಉಪ–ಪ್ರಕರಣದನ್ವಯ ಮರಣದ ಕಾರಣದ ಬಗ್ಗೆ ಕೊಡಬೇಕಾಗಿರುವ ಪ್ರಮಾಣ ಪತ್ರವನ್ನು ಮರಣವು ಆಸ್ಪತ್ರೆಯಲ್ಲಾಗಿದ್ದರೆ (ಸರಕಾರಿ ಅಥವಾ ಖಾಸಗಿ) ಪ್ರಪತ್ರ 4 ರಲ್ಲಿ, ಇತರ ಸ್ಥಳಗಳಲ್ಲಾಗಿದ್ದರೆ ಪ್ರಪತ್ರ 4(ಎ) ಯಲ್ಲಿ ಕೊಡತಕ್ಕದ್ದು ಮತ್ತು ನೋಂದಣಿದಾರರು ಜನನ ಮರಣಗಳ ವಹಿಯಲ್ಲಿ ಅವಶ್ಯಕ ನಮೂದುಗಳನ್ನು ಮಾಡಿದ ತರುವಾಯ, ಪ್ರಮಾಣ ಪತ್ರಗಳು ಯಾವ ತಿಂಗಳಿಗೆ ಸಂಬಂಧಪಡುತ್ತವೋ ಆ ತಿಂಗಳಿನ ನಂತರ ಕೂಡಲೇ ಬರುವ ತಿಂಗಳಿನ 10ನೆಯ ದಿನಾಂಕದೊಳಗೆ ಅಂತಹ ಎಲ್ಲ ಪ್ರಮಾಣ ಪತ್ರಗಳನ್ನು ಮುಖ್ಯ ನೋಂದಣಾಧಿಕಾರಿಯವರಿಗೆ ಕಳುಹಿಸತಕ್ಕದ್ದು.

**8.** **12ನೆಯ ಪ್ರಕರಣದ ಮೇರೆಗೆ ನೀಡಬೇಕಾಗಿರುವ ನೋಂದಣಿ ನಮೂದುಗಳ ಉದ್ಧೃತಗಳು:**

(1) 12ನೆಯ ಪ್ರಕರಣದ ಮೇರೆಗೆ ಸುದ್ದಿಗಾರನಿಗೆ ಕೊಡಬೇಕಾದ ಜನನ ಅಥವಾ ಮರಣಗಳಿಗೆ ಸಂಬಂಧಪಟ್ಟ ವಹಿಯ ಉದ್ಧೃತಗಳು ಸಂದರ್ಭಾನುಸಾರ 5ನೆಯ ಅಥವಾ 6ನೆಯ ಪ್ರಪತ್ರದಲ್ಲಿ ಇರತಕ್ಕದ್ದು.

(2) 8ನೇ ಪ್ರಕರಣದ (1)ನೆಯ ಉಪ–ಪ್ರಕರಣದ ಕಲಂ (ಎ)ನಲ್ಲಿ ತಿಳಿಸಿರುವಂತೆ, ವಾಸ ಸ್ಥಾನದಲ್ಲಾಗುವ ಜನನ, ಮರಣ ಘಟನೆಗಳನ್ನು, ಸಂದರ್ಭಾನುಸಾರ ಮನೆಯ ಅಥವಾ ಕುಟುಂಬದ ಮುಖ್ಯಸ್ಥ ಅಥವಾ ಆತನ ಗೈರು ಹಾಜರಿಯಲ್ಲಿ, ಆ ಸಮಯದಲ್ಲಿ ಹಾಜರಿದ್ದ ಮುಖ್ಯಸ್ಥನ ಅತ್ಯಂತ ಹತ್ತಿರದ ಸಂಬಂಧಿ ನೋಂದಣಿದಾರರಿಗೆ ನೇರವಾಗಿ ವರದಿ ಮಾಡಿದಲ್ಲಿ, ವರದಿ ಮಾಡಿದ ಮೂವತ್ತು ದಿನಗಳೊಳಗಾಗಿ ನೋಂದಣಿದಾರರಿಂದ ಜನನ ಅಥವಾ ಮರಣಗಳ ಉದ್ಧೃತಗಳನ್ನು ಪಡೆಯಬಹುದು.

(3) 8ನೇ ಪ್ರಕರಣದ (1)ನೆಯ ಉಪ–ಪ್ರಕರಣದ ಕಲಂ (ಎ)ನಲ್ಲಿ ತಿಳಿಸಿರುವಂತೆ, ವಾಸ ಸ್ಥಾನದಲ್ಲಿ ಸಂಭವಿಸುವ ಜನನ ಮತ್ತು ಮರಣ ಘಟನೆಗಳ ಬಗೆಗೆ, ಈ ಪ್ರಕರಣದ (2)ನೇ ಉಪ–ಪ್ರಕರಣದಲ್ಲಿ ರಾಜ್ಯ ಸರ್ಕಾರ ನಿಗದಿಪಡಿಸಿದ ವ್ಯಕ್ತಿಗಳು ವರದಿ ಮಾಡಿದಾಗ, ಈ ರೀತಿ ನಿಗದಿಯಾದ ವ್ಯಕ್ತಿಗಳು ಜನನ ಮತ್ತು ಮರಣಗಳ ನೋಂದಣಿದಾರರಿಂದ ಪಡೆದ ಉದ್ಧೃತ ಭಾಗಗಳನ್ನು, ಸಂದರ್ಭಾನುಸಾರ, ಮನೆಯ ಅಥವಾ ಕುಟುಂಬದ ಮುಖ್ಯಸ್ಥನಿಗೆ ಅಥವಾ ಆತನ ಗೈರು ಹಾಜರಿಯಲ್ಲಿ, ಮನೆಯಲ್ಲಿ ಹಾಜರಿರುವ ಮುಖ್ಯಸ್ಥನ ಅತ್ಯಂತ ಸಮೀಪದ ಸಂಬಂಧಿಗೆ, ನೋಂದಣಿದಾರರು ನೀಡಿದ ಉದ್ಧೃತವನ್ನು ಮೂವತ್ತು ದಿನಗಳೊಳಗಾಗಿ ರವಾನಿಸುವುದು.

(4) 8ನೇ ಪ್ರಕರಣದ (1)ನೆಯ ಉಪ–ಪ್ರಕರಣದ (ಬಿ) ಯಿಂದ (ಇ) ವರೆಗಿನ ಕಲಂಗಳಿಗೆ ಒಳಪಟ್ಟ ಸಾಂಸ್ಥಿಕ ಜನನ ಮತ್ತು ಮರಣ ಘಟನೆಗಳಿಗೆ ಸಂಬಂಧಿಸಿದಂತೆ, ನವಜಾತ ಶಿಶುವಿನ ಅಥವಾ ಮೃತ ಹೊಂದಿದವರ ಅತ್ಯಂತ ಸಮೀಪದ ಸಂಬಂಧಿ, ಸಂಸ್ಥೆಯ ಅಧಿಕಾರಿ ಅಥವಾ ಪ್ರಭಾರದಲ್ಲಿರುವ ವ್ಯಕ್ತಿಯಿಂದ, ಜನನ ಅಥವಾ ಮರಣ ಘಟನೆಯು ಸಂಭವಿಸಿದ ಮೂವತ್ತು ದಿನಗಳೊಳಗಾಗಿ ಉದ್ಧೃತವನ್ನು ಪಡೆಯಬಹುದು.

© 2003, Directorate of Economics and Statistics, Govt. of Karnataka. All Rights Reserved.

(5) ಉಪ ನಿಯಮ (2) ರಿಂದ (4)ರವರೆಗೆ ಸೂಚಿಸಿದಂತೆ, ಸಂಬಂಧಿಸಿದ ವ್ಯಕ್ತಿಯು ಜನನ ಅಥವಾ ಮರಣ ಉದ್ಧೃತವನ್ನು ಅದರಲ್ಲಿ ಗೊತ್ತು ಪಡಿಸಲಾದ ಅವಧಿಯೊಳಗೆ ಪಡೆಯದಿದ್ದರೆ, ಅದನ್ನು ಉಪ–ನಿಯಮ (4)ರಲ್ಲಿ ಸೂಚಿಸಿದಂತೆ ನೋಂದಣಿದಾರರು ಅಥವಾ ಸಂಸ್ಥೆಯ ಅಧಿಕಾರಿ ಅಥವಾ ಪ್ರಭಾರವನ್ನು ಹೊಂದಿರುವ ವ್ಯಕ್ತಿ, ಸಂಬಂಧಿಸಿದ ಕುಟುಂಬಕ್ಕೆ ಮೇಲೆ ತಿಳಿಸಿದ ಅವಧಿ ಮುಗಿದ ಹದಿನೈದು ದಿನಗಳೊಳಗಾಗಿ ಅಂಚೆ ಮೂಲಕ ರವಾನಿಸುವುದು.

**9.** ವಿಳಂಬ ನೋಂದಣಿಯ ಬಗ್ಗೆ ಪ್ರಾಧಿಕಾರ ಮತ್ತು ಅದಕ್ಕೆ ಸಂದಾಯಮಾಡಬೇಕಾದ ಶುಲ್ಕ :

(1) ಯಾವುದೇ ಜನನ ಅಥವಾ ಮರಣದ ಬಗ್ಗೆ 5ನೆಯ ನಿಯಮದಲ್ಲಿ ಸೂಚಿಸಿದ ಅವಧಿಯು ಮುಗಿದ ತರುವಾಯ ಆದರೆ ಅದು ಸಂಭವಿಸಿದ ಮೂವತ್ತು ದಿನಗಳೊಳಗೆ ನೋಂದಣಿದಾರರಿಗೆ ವಿವರಣೆಯನ್ನು ಕೊಡಲಾಗಿದೆಯೋ, ಅಂತಹ ಜನನ ಅಥವಾ ಮರಣವನ್ನು ಎರಡು ರೂಪಾಯಿಗಳ ತಡ ಶುಲ್ಕ ಸಂದಾಯವಾದ ಮೇಲೆ ನೋಂದಾಯಿಸತಕ್ಕದ್ದು.

(2) ಯಾವುದೇ ಜನನ ಅಥವಾ ಮರಣದ ಬಗ್ಗೆ ಮೂವತ್ತು ದಿನಗಳ ತರುವಾಯ ಆದರೆ ಅದು ಸಂಭವಿಸಿದ ಒಂದು ವರ್ಷದೊಳಗೆ ನೋಂದಣಿದಾರರಿಗೆ ವಿವರಣೆಯನ್ನು ಕೊಡಲಾಗಿದೆಯೋ, ಅಂತಹ ಜನನ ಅಥವಾ ಮರಣಕ್ಕೆ ಸಂದರ್ಭಾನುಸಾರ ತಹಸೀಲ್ದಾರರ ಅಥವಾ ಮುನಿಸಿಪಾಲಿಟಿಯ ಕಮೀಷನರ್/ಮುಖ್ಯಾಧಿಕಾರಿಯ ಲಿಖಿತ ಅನುಮತಿಯೊಂದಿಗೆ ಮತ್ತು ಐದು ರೂಪಾಯಿಯ ತಡ ಶುಲ್ಕ ಸಂದಾಯವಾದ ಮೇಲೆ ಮಾತ್ರ ನೋಂದಾಯಿಸತಕ್ಕದ್ದು.

(3) ಯಾವ ಜನನ ಅಥವಾ ಮರಣವು, ಸಂಭವಿಸಿದ ಒಂದು ವರ್ಷದೊಳಗೆ ನೋಂದಾಯಿಸಲ್ಪಟ್ಟಿಲ್ಲವೋ ಅದನ್ನು 13(3) ಪ್ರಕರಣದನ್ವಯ ಮೊದಲನೆಯ ವರ್ಗದ ದಂಡಾಧಿಕಾರಿಯ ಅಥವಾ ಮಹಾ ಪ್ರಾಂತ ದಂಡಾಧಿಕಾರಿಯ (Presidency Magistrate) ಆದೇಶದ ಮೇರೆಗೆ ಮತ್ತು ಹತ್ತು ರೂಪಾಯಿಗಳ ತಡ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ಮಾತ್ರ ನೋಂದಾಯಿಸತಕ್ಕದ್ದು.

**10. 14ನೆಯ ಪ್ರಕರಣದ ಉದ್ದೇಶಕ್ಕೆ ಸಂಬಂಧಪಟ್ಟ ಅವಧಿ:–**

(1) ಯಾವುದೇ ಮಗುವಿನ ಜನನವನ್ನು ಹೆಸರು ಇಲ್ಲದೆ ನೋಂದಾಯಿಸಿದ್ದರೆ, ಅಂತಹ ಮಗುವಿನ ತಾಯಿ, ತಂದೆ ಅಥವಾ ಪಾಲಕರು ಮಗುವಿನ ಜನನದ ನೋಂದಣಿ ದಿನಾಂಕದಿಂದ 12 ತಿಂಗಳೊಳಗೆ ಆ ಮಗುವಿನ ಹೆಸರನ್ನು ನೋಂದಣಿದಾರರಿಗೆ ಮೌಖಿಕವಾಗಿ ಅಥವಾ ಲಿಖಿತವಾಗಿ ತಿಳಿಸತಕ್ಕದ್ದು:

ಪರಂತು, ಮಾಹಿತಿಯನ್ನು ಮೇಲೆ ತಿಳಿಸಿದ 12 ತಿಂಗಳ ನಂತರ ಆದರೆ 15 ವರ್ಷಗಳೊಳಗಾಗಿ ನೀಡಿದರೆ, ಅದನ್ನು ಲೆಕ್ಕ ಹಾಕುವ ವಿಧಾನ

(i) ಈ ನಿಯಮಗಳು ಪ್ರಾರಂಭವಾಗುವ ದಿನಾಂಕಕ್ಕೆ ಮುಂಚಿತವಾಗಿ ನೋಂದಣಿ ಮಾಡಿದ್ದರೆ, ನಿಯಮಗಳು ಪ್ರಾರಂಭವಾದ ದಿನಾಂಕ (1.1.2000) ದಿಂದ ಅಥವಾ

(ii) ಈ ನಿಯಮಗಳು ಪ್ರಾರಂಭವಾದ ದಿನಾಂಕದ ನಂತರ ನೋಂದಣಿ ಮಾಡಿದ್ದರೆ, ನೋಂದಣಿಯ ಆ ದಿನಾಂಕದಿಂದ ನೋಂದಣಿದಾರರು,

(ಅ) ಜನನ ವಹಿಯು ತಮ್ಮ ವಶದಲ್ಲಿದ್ದರೆ ತಡ ಶುಲ್ಕ ರೂ. ಐದು ಸಂದಾಯವಾದ ಬಳಿಕ ಸಂಬಂಧಿಸಿದ ಪ್ರಪತ್ರದ ಸೂಕ್ತ ಕಾಲಂನಲ್ಲಿ ಕೂಡಲೇ ಹೆಸರನ್ನು ನಮೂದಿಸುವುದು ಮತ್ತು

(ಆ) ವಹಿಯು ತಮ್ಮ ವಶದಲ್ಲಿರದಿದ್ದರೆ ಮತ್ತು ವಿವರಣೆಯನ್ನು ಮೌಖಿಕವಾಗಿ ಕೊಟ್ಟಿದ್ದರೆ, ಅವಶ್ಯಕ ವಿವರಗಳನ್ನು ಕೊಟ್ಟು ವರದಿ ಮಾಡತಕ್ಕದ್ದು ಮತ್ತು ವಿವರಣೆಯನ್ನು ಲಿಖಿತವಾಗಿ ಕೊಟ್ಟಿದ್ದರೆ, ರೂ ಐದು ತಡ ಶುಲ್ಕ ಸಂದಾಯ ಮಾಡಿದ ಮೇಲೆ ಅವಶ್ಯಕ ನಮೂದನ್ನು ಮಾಡುವುದಕ್ಕಾಗಿ ಸಂದರ್ಭಾನುಸಾರ ಅದನ್ನು ತಹಸೀಲ್ದಾರರಿಗೆ ಅಥವಾ ಆಯಾ ಮುನಿಸಿಪಾಲಿಟಿಯ ಕಮೀಷನರಿಗೆ/ ಮುಖ್ಯಾಧಿಕಾರಿಗೆ ಕಳುಹಿಸತಕ್ಕದ್ದು.

© 2003, Directorate of Economics and Statistics, Govt. of Karnataka. All Rights Reserved.

(2) ಆಯಾ ಸಂದರ್ಭಾನುಸಾರ ತಂದೆ, ತಾಯಿ ಅಥವಾ ಪಾಲಕರು 12ನೆಯ ಪ್ರಕರಣದ ಮೇರೆಗೆ ತಮಗೆ ಕೊಡಲ್ಪಟ್ಟ ಉದ್ಧೃತ ಭಾಗದ ಪ್ರತಿಯನ್ನು ಅಥವಾ 17ನೆಯ ಪ್ರಕರಣದ ಮೇರೆಗೆ ಕೊಡಲ್ಪಟ್ಟ ಪ್ರಮಾಣೀಕರಿಸಿದ ಉದ್ಧೃತ ಭಾಗವನ್ನು ನೋಂದಣಿದಾರರಿಗೆ ಒಪ್ಪಿಸತಕ್ಕದ್ದು ಮತ್ತು ಹಾಗೆ ಒಪ್ಪಿಸಿದಾಗ, ನೋಂದಣಿದಾರರು ಮಗುವಿನ ಹೆಸರಿಗೆ ಸಂಬಂಧಪಟ್ಟ ಅವಶ್ಯಕ ಹಿಂಬರಹವನ್ನು ಬರೆಯತಕ್ಕದ್ದು ಅಥವಾ (1)ನೆಯ ಉಪ–ನಿಯಮದ ಪರಂತುಕದ (ಆ) ಕಲಂದಲ್ಲಿ ಸೂಚಿಸಿರುವಂತೆ ಕ್ರಮವನ್ನು ಕೈಕೊಳ್ಳತಕ್ಕದ್ದು.

**11.** ಜನನ ಮತ್ತು ಮರಣಗಳ ವಹಿಯಲ್ಲಿ ನಮೂದಿನ ತಿದ್ದುಪಡಿ ಅಥವಾ ರದ್ದುಗೊಳಿಸುವುದು–

(1) ವಹಿಯಲ್ಲಿ ಬರವಣಿಗೆಯ ಅಥವಾ ಔಪಚಾರಿಕ ತಪ್ಪನ್ನು ಮಾಡಲಾಗಿದೆ ಎಂದು ನೋಂದಣಿದಾರರಿಗೆ ವರದಿ ಮಾಡಲ್ಪಟ್ಟರೆ ಅಥವಾ ಅಂತಹ ತಪ್ಪನ್ನು ತಾವು ಬೇರೆ ರೀತಿಯಲ್ಲಿ ಗಮನಿಸಿದ್ದರೆ ಮತ್ತು ವಹಿಯು ಅವರ ಸ್ವಾಧೀನದಲ್ಲಿದ್ದರೆ, ನೋಂದಣಿದಾರರು ವಿಷಯದ ಬಗ್ಗೆ ವಿಚಾರಿಸತಕ್ಕದ್ದು ಮತ್ತು ಅಂತಹ ಯಾವುದೇ ತಪ್ಪು ಮಾಡಲ್ಪಟ್ಟಿದೆಯೆಂದು ಮನವರಿಕೆಯಾದರೆ,15ನೆಯ ಪ್ರಕರಣದಲ್ಲಿ ಉಪಬಂಧಿಸಿರುವ ರೀತ್ಯಾ (ನಮೂದನ್ನು ತಿದ್ದುವುದರ ಅಥವಾ ರದ್ದುಗೊಳಿಸುವುದರ ಮೂಲಕ) ತಪ್ಪನ್ನು ತಿದ್ದತಕ್ಕದ್ದು, ಮತ್ತು ಆ ತಪ್ಪನ್ನು ಹೇಗೆ ತಿದ್ದಲಾಗಿದೆ ಎಂಬುದನ್ನು ತೋರಿಸುವ ನಮೂದಿನ ಉದ್ಧೃತ ಭಾಗವನ್ನು ರಾಜ್ಯ ಸರ್ಕಾರಕ್ಕೆ ಅಥವಾ ಆಯಾ ಸಂದರ್ಭಾನುಸಾರ ತಹಸೀಲ್ದಾರರಿಗೆ ಅಥವಾ ಮುನಿಸಿಪಾಲಿಟಿಯ ಕಮೀಷನರಿಗೆ/ ಮುಖ್ಯಾಧಿಕಾರಿಗೆ ಕಳುಹಿಸತಕ್ಕದ್ದು.

(2) (1)ನೆಯ ಉಪ–ನಿಯಮದಲ್ಲಿ ಉಲ್ಲೇಖಿಸಿದ ಸಂದರ್ಭದಲ್ಲಿ, ವಹಿಯು ಅವರ ಸ್ವಾಧೀನದಲ್ಲಿಲ್ಲದಿದ್ದರೆ, ನೋಂದಣಿದಾರರು ರಾಜ್ಯಸರ್ಕಾರಕ್ಕೆ ಅಥವಾ ಸಂದರ್ಭಾನುಸಾರ ತಹಸೀಲ್ದಾರರಿಗೆ ಅಥವಾ ಮುನಿಸಿಪಾಲಿಟಿಯ ಕಮೀಷನರಿಗೆ/ಮುಖ್ಯಾಧಿಕಾರಿಗೆ ವರದಿ ಮಾಡತಕ್ಕದ್ದು ಮತ್ತು ಸಂಬಂಧಪಟ್ಟ ವಹಿಯನ್ನು ಒದಗಿಸಬೇಕೆಂದು ಕೋರತಕ್ಕದ್ದು ಮತ್ತು ವಿಷಯವನ್ನು ಪರಿಶೀಲಿಸಿದ ತರುವಾಯ, ಅಂತಹ ಯಾವುದೇ ತಪ್ಪನ್ನು ಮಾಡಲಾಗಿದೆಯೆಂದು ಮನವರಿಕೆಯಾದರೆ, ಅವಶ್ಯಕವಾದ ತಿದ್ದುಪಡಿಯನ್ನು ಮಾಡತಕ್ಕದ್ದು.

(3) (2)ನೆಯ ಉಪನಿಯಮದಲ್ಲಿ ನಮೂದಿಸಿದಂತಹ ಯಾವುದೇ ತಿದ್ದುಪಡಿಯ ಬಗ್ಗೆ ನೋಂದಣಿದಾರರಿಂದ ವಹಿಯನ್ನು ಪಡೆದಾಗ ರಾಜ್ಯಸರ್ಕಾರದಿಂದ ಅಥವಾ ಆಯಾ ಸಂದರ್ಭಾನುಸಾರ ತಹಸೀಲ್ದಾರರಿಂದ ಅಥವಾ ಮುನಿಸಿಪಾಲಿಟಿಯ ಕಮೀಷನರಿಂದ/ ಮುಖ್ಯಾಧಿಕಾರಿಯಿಂದ ಮೇಲು ರುಜು ಮಾಡಲ್ಪಡತಕ್ಕದ್ದು.

(4) ಜನನ ಮತ್ತು ಮರಣಗಳ ವಹಿಯಲ್ಲಿಯ ಯಾವುದೇ ನಮೂದು ದೋಷಯುಕ್ತವಾಗಿದೆಯೆಂದು ಯಾವುದೇ ವ್ಯಕ್ತಿಯು ನಿಖರವಾಗಿ ಹೇಳಿದರೆ, ಅಂತಹ ವ್ಯಕ್ತಿಯು ತಪ್ಪಿನ ಸ್ವರೂಪವನ್ನು ಮತ್ತು ಆ ವ್ಯವಹಾರಕ್ಕೆ ಸಂಬಂಧಿಸಿದ ನಿಜವಾದ ಅಂಶಗಳ ಬಗ್ಗೆ ತಿಳುವಳಿಕೆ ಹೊಂದಿರುವ ಇಬ್ಬರು ವಿಶ್ವಾಸಾರ್ಹ ವ್ಯಕ್ತಿಗಳ ಘೋಷಣೆಯನ್ನು ಒಪ್ಪಿಸಿದಾಗ, ನೋಂದಣಿದಾರರು 15ನೆಯ ಪ್ರಕರಣದ ಮೇರೆಗೆ ನಿಗದಿ ಪಡಿಸಿದ ರೀತಿಯಲ್ಲಿ ನಮೂದನ್ನು ತಿದ್ದಬಹುದು.

(5) (1)ನೆಯ ಉಪನಿಯಮದಲ್ಲಿ ಅಥವಾ (4)ನೆಯ ಉಪ–ನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ, ನೋಂದಣಿದಾರರು ರಾಜ್ಯಸರ್ಕಾರಕ್ಕೆ ಅಥವಾ ಆಯಾ ಸಂದರ್ಭಾನುಸಾರ ತಹಸೀಲ್ದಾರರಿಗೆ ಅಥವಾ ಮುನಿಸಿಪಾಲಿಟಿಯ ಕಮೀಷನರಿಗೆ/ಮುಖ್ಯಾಧಿಕಾರಿಗೆ ಅವಶ್ಯಕ ವಿವರಗಳನ್ನು ಒದಗಿಸಿ, ಅದರಲ್ಲಿ ಉಲ್ಲೇಖಿಸಿದ ಯಾವುದೇ ರೀತಿಯ ತಿದ್ದುಪಡಿಯ ಬಗ್ಗೆ ವರದಿ ಮಾಡತಕ್ಕದ್ದು.

(6) ಜನನ ಮತ್ತು ಮರಣಗಳ ವಹಿಯಲ್ಲಿಯ ಯಾವುದೇ ನಮೂದು ವಂಚನೆಯಿಂದ ಅಥವಾ ಅನುಚಿತವಾಗಿ ಮಾಡಲ್ಪಟ್ಟಿದೆಯೆಂದು ನೋಂದಣಿದಾರರು ಸಮಾಧಾನ ಹೊಂದುವ ರೀತಿಯಲ್ಲಿ ರುಜುವಾತಾಗಿದ್ದರೆ, ಈ ಸಂಬಂಧದಲ್ಲಿ 25ನೆಯ ಪ್ರಕರಣದ ಮೇರೆಗೆ ಸಾಮಾನ್ಯ ಅಥವಾ ವಿಶೇಷ ಆದೇಶಗಳ ಮೂಲಕ ಮುಖ್ಯ ನೋಂದಣಾಧಿಕಾರಿಯವರಿಂದ ಪ್ರಾಧಿಕಾರ ಹೊಂದಿರುವ ಅಧಿಕಾರಿಗೆ ಅವಶ್ಯಕ ವಿವರಗಳೊಂದಿಗೆ ವರದಿ ಮಾಡತಕ್ಕದ್ದು ಮತ್ತು ಅವನು ಹೇಳಿಕೆಯನ್ನು ಕೊಟ್ಟ ತರುವಾಯ, ಈ ವಿಷಯದಲ್ಲಿ ಅವಶ್ಯಕ ಕ್ರಮ ತೆಗೆದುಕೊಳ್ಳತಕ್ಕದ್ದು.

(7) ಈ ನಿಯಮಕ್ಕೆ ಒಳಪಟ್ಟು ನಮೂದನ್ನು ತಿದ್ದಲಾಗಿರುವ ಅಥವಾ ರದ್ದುಗೊಳಿಸಲಾಗಿರುವ ಪ್ರತಿ ಸಂದರ್ಭದಲ್ಲೂ, ಆ ಸಂಬಂಧದ ಮಾಹಿತಿಯನ್ನು 8ನೆಯ ಪ್ರಕರಣದ ಅಥವಾ 9ನೆಯ ಪ್ರಕರಣದ ಮೇರೆಗೆ ವಿವರಣೆಯನ್ನು ಕೊಟ್ಟಿರುವ ವ್ಯಕ್ತಿಯ ಖಾಯಂ ವಿಳಾಸಕ್ಕೆ ಕಳುಹಿಸತಕ್ಕುದು.

© 2003, Directorate of Economics and Statistics, Govt. of Karnataka. All Rights Reserved.

**12. 16ನೆಯ ಪ್ರಕರಣದ ಮೇರೆಗೆ ವಹಿಯ ಪ್ರಪತ್ರ:** ಪ್ರತಿ ನೋಂದಣಿದಾರರು, ಪ್ರತಿಯೊಂದು ನೋಂದಣಿ ಪ್ರದೇಶದ ಅಥವಾ ಅದರ ಯಾವುದೇ ಭಾಗದ ಜನನ, ಮರಣ ಮತ್ತು ಸಜೀವ ಜನನಗಳ ವಹಿಯನ್ನು ಕ್ರಮವಾಗಿ ಪ್ರಪತ್ರ 7,8 ಮತ್ತು 9ರಲ್ಲಿ ಇಡತಕ್ಕದ್ದು, ಆ ವಹಿಗಳಲ್ಲಿ ನಮೂನೆ 1,2 ಮತ್ತು 3 ರ ಕಾನೂನು ಭಾಗಗಳು ಒಳಪಟ್ಟಿರತಕ್ಕದ್ದು.

**13. 17ನೆಯ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಶುಲ್ಕ ಮತ್ತು ಅಂಚೆ ವೆಚ್ಚ :**

(1) 17ನೆಯ ಪ್ರಕರಣದ ಮೇರೆಗೆ ಮಾಡಬೇಕಾದ ಶೋಧನೆ, ಕೊಡಬೇಕಾದ ಉದ್ಧೃತ ಭಾಗ ಅಥವಾ ಅಲಭ್ಯ ಪ್ರಮಾಣ ಪತ್ರಕ್ಕೆ ಸಂದಾಯ ಮಾಡಬೇಕಾದ ಶುಲ್ಕವು ಈ ಕೆಳಕಂಡಂತೆ ಇರತಕ್ಕದ್ದು.

| | | |
|---|---|---|
| ಅ. | ಮೊದಲನೆಯ ವರ್ಷದಲ್ಲಿ ಯಾವ ಸಂಬಂಧದಲ್ಲಿ ಶೋಧನೆ ಮಾಡಲಾಯಿತೋ ಆ ವರ್ಷದಲ್ಲಿನ ಪ್ರತಿ ನಮೂದಿನ ಶೋಧನೆಗಾಗಿ. | ರೂ. 2.00 |
| ಆ. | ಶೋಧನೆಯನ್ನು ಮುಂದುವರಿಸಲಾದ ಪ್ರತಿಯೊಂದು ಹೆಚ್ಚಿನ ವರ್ಷಕ್ಕೆ | ರೂ. 2.00 |
| ಇ. | ಪ್ರತಿ ಜನನ ಅಥವಾ ಮರಣಕ್ಕೆ ಸಂಬಂಧಪಟ್ಟ ಉದ್ಧೃತದ ನೀಡಿಕೆಗಾಗಿ | ರೂ. 5.00 |
| ಈ. | ಜನನ ಅಥವಾ ಮರಣದ ಅಲಭ್ಯ ಪ್ರಮಾಣ ಪತ್ರದ ನೀಡಿಕೆಗಾಗಿ | ರೂ. 2.00 |

(2) ಜನನ ಅಥವಾ ಮರಣ ಸಂಬಂಧದಲ್ಲಿ ಇಂತಹ ಯಾವುದೇ ಉದ್ಧೃತ ಭಾಗವು ಆಯಾ ಸಂದರ್ಭಾನುಸಾರ 5ನೆಯ ಪ್ರಪತ್ರದಲ್ಲಿ ಅಥವಾ 6ನೆಯ ಪ್ರಪತ್ರದಲ್ಲಿ ನೋಂದಣಿದಾರರಿಂದ ಅಥವಾ ತಹಸೀಲ್ದಾರರಿಂದ ಅಥವಾ ಆಯುಕ್ತರು ಅಥವಾ ಮುಖ್ಯಾಧಿಕಾರಿಗಳಿಂದ ಕೊಡಲ್ಪಡತಕ್ಕದ್ದು ಮತ್ತು 1872ನೆಯ ಇಸವಿಯ ಭಾರತೀಯ ಸಾಕ್ಷ್ಯದ ಅಧಿನಿಯಮದ (1872ನೆಯ ಇಸವಿಯ 1ನೆಯ ಅಧಿನಿಯಮ) 76ನೆಯ ಪ್ರಕರಣದಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಪ್ರಮಾಣೀಕರಿಸತಕ್ಕದ್ದು.

(3) ಯಾವುದೇ ನಿರ್ದಿಷ್ಟ ಜನನ ಅಥವಾ ಮರಣದ ಘಟನೆ ನೋಂದಣಿಯಾಗಿಲ್ಲವೆಂದು ಕಂಡು ಬಂದಲ್ಲಿ, ನೋಂದಣಿದಾರರು ನಮೂನೆ 10ರಲ್ಲಿ ಅಲಭ್ಯ ಪ್ರಮಾಣ ಪತ್ರವನ್ನು ನೀಡತಕ್ಕದ್ದು.

(4) ಅಲಭ್ಯ ಪ್ರಮಾಣ ಪತ್ರವನ್ನು ಅಥವಾ ಉದ್ಧೃತ ಭಾಗವನ್ನು, ಅದನ್ನು ಕೇಳುವ ವ್ಯಕ್ತಿಗೆ ನೀಡುವುದು ಅಥವಾ ಅದಕ್ಕೆ ತಗಲುವ ಅಂಚೆ ವೆಚ್ಚವನ್ನು ಪಡೆದು ಕಳುಹಿಸತಕ್ಕದ್ದು.

**14. 19ನೆಯ ಪ್ರಕರಣದಡಿ, ನಮೂನೆಗಳ ಮತ್ತು ನಿಯತಕಾಲಿಕೆಗಳ ಸಲ್ಲಿಸುವಿಕೆಗೆ ಕಾಲಾವಧಿ:**

(1) ಪ್ರತಿ ನೋಂದಣಿದಾರರು ನೋಂದಣಿ ವಿಧಿ ವಿಧಾನಗಳನ್ನು ಪೂರೈಸಿದ ಬಳಿಕ, ಪ್ರತಿ ತಿಂಗಳಿಗೆ ಸಂಬಂಧಿಸಿದ ವರದಿ ನಮೂನೆಗಳ ಎಲ್ಲಾ ಸಾಂಖ್ಯಿಕ ಭಾಗಗಳನ್ನು, ಮಾಸಿಕ ಸಾರಾಂಶ ವರದಿಯೊಂದಿಗೆ, ಜನನಗಳಿಗೆ ನಮೂನೆ 11, ಮರಣಗಳಿಗೆ ನಮೂನೆ 12 ಮತ್ತು ನಿರ್ಜೀವ ಜನನಗಳಿಗೆ ನಮೂನೆ 13 ರಲ್ಲಿ ಗ್ರಾಮೀಣ ಪ್ರದೇಶಗಳಿಗೆ ಸಂಬಂಧಿಸಿದಂತೆ ತಹಸೀಲ್ದಾರರಿಗೆ ಹಾಗೂ ನಗರ ಪ್ರದೇಶಗಳಿಗೆ ಸಂಬಂಧಿಸಿದಂತೆ ಮುನಿಸಿಪಾಲಿಟಿ ಆಯುಕ್ತರಿಗೆ/ಮುಖ್ಯಾಧಿಕಾರಿಗಳಿಗೆ ಅದರ ಮುಂದಿನ ತಿಂಗಳ 5ನೇ ತಾರೀಖು ಅಥವಾ ಅದರೊಳಗಾಗಿ ಕಳುಹಿಸತಕ್ಕದ್ದು.

(2) ನಿರ್ದಿಷ್ಟಪಡಿಸಿದ ಅಧಿಕಾರಿಯು ವರದಿ ನಮೂನೆಗಳ ಅಂತಹ ಎಲ್ಲಾ ಸಾಂಖ್ಯಿಕ ಭಾಗಗಳನ್ನು ಮಾಸಿಕ ಸಾರಾಂಶ ವರದಿಯೊಂದಿಗೆ ಮುಖ್ಯ ನೋಂದಣಾಧಿಕಾರಿಗಳಿಗೆ ಅದೇ ತಿಂಗಳಿನ 10ನೆಯ ತಾರೀಖಿನೊಳಗೆ ಕಳುಹಿಸತಕ್ಕದ್ದು.

**15. 19ನೆಯ ಪ್ರಕರಣದ ಮೇರೆಗೆ ಅಂಕಿ ಅಂಶಗಳ ವರದಿ :** 19ನೆಯ ಪ್ರಕರಣದ (2) ನೆಯ ಉಪ ಪ್ರಕರಣದ ಅಡಿಯಲ್ಲಿನ ಸಾಂಖ್ಯಿಕ ವರದಿಯು ಆ ವರ್ಷದಲ್ಲಿ ನೋಂದಾಯಿಸಿದ ಜನನ ಮತ್ತು ಮರಣಗಳ ವಿವರಗಳನ್ನು ಒಳಗೊಂಡಿದ್ದು, ಆ

© 2003, Directorate of Economics and Statistics, Govt. of Karnataka. All Rights Reserved.

ವರ್ಷಕ್ಕೆ ಸಂಬಂಧಿಸಿದಂತೆ ಮುಂದಿನ ವರ್ಷದ ಜುಲೈ 31ರೊಳಗೆ ಆ ವಿವರಗಳನ್ನು ಕ್ರೋಢೀಕರಿಸಿ ನಂತರ ಸಾಧ್ಯವಾದಷ್ಟು ಬೇಗ, ಆ ದಿನಾಂಕದಿಂದ ಐದು ತಿಂಗಳು ಮೀರದಂತೆ ಪ್ರಕಟಿಸತಕ್ಕದ್ದು.

**16. ಅಪರಾಧಗಳ ಬಗ್ಗೆ ರಾಜಿ ಮಾಡಿಕೊಳ್ಳುವುದಕ್ಕೆ ಸಂಬಂಧಪಟ್ಟ ಷರತ್ತುಗಳು :**

(1) 23ನೆಯ ಪ್ರಕರಣದ ಮೇರೆಗೆ ಶಿಕ್ಷಾರ್ಹವಾದ ಯಾವುದೇ ಅಪರಾಧದ ಬಗ್ಗೆ, ಅಧಿನಿಯಮದ ಮೇರೆಗೆ ದಂಡ ಕಾರ್ಯವಾಹಿಗಳನ್ನು ನಡೆಸುವ ಮೊದಲು ಅಥವಾ ತರುವಾಯ, ಈ ಸಂಬಂಧದಲ್ಲಿ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಮುಖ್ಯ ನೋಂದಣಾಧಿಕಾರಿಗಳಿಂದ ಪ್ರಾಧಿಕಾರ ಹೊಂದಿರುವ ಒಬ್ಬ ಅಧಿಕಾರಿಯ ಮೂಲಕ, ಅಪರಾಧವು ಅಜಾಗರೂಕತೆಯಿಂದ ಅಥವಾ ಪ್ರಮಾದದಿಂದ ಅಥವಾ ಮೊದಲನೆಯ ಸಲ ಮಾಡಲ್ಪಟಿದೆಯೆಂದು ಹಾಗೆ ಪ್ರಾಧಿಕಾರ ಹೊಂದಿರುವ ಅಧಿಕಾರಿಗೆ ಮನವರಿಕೆ ಯಾದರೆ ರಾಜಿ ಮಾಡಿಕೊಳ್ಳಬಹುದು.

(2) 23ನೆಯ ಪ್ರಕರಣದ (1)ನೆಯ, (2)ನೆಯ ಮತ್ತು (3)ನೆಯ ಉಪ-ಪ್ರಕರಣಗಳಿಗೆ ಒಳಪಟ್ಟಿರುವ ಅಪರಾಧಗಳಿಗೆ ಐವತ್ತು ರೂಪಾಯಿಗಳನ್ನು ಮೀರದಂತೆ ಮತ್ತು (4)ನೆಯ ಉಪ-ಪ್ರಕರಣಕ್ಕೆ ಒಳಪಟ್ಟಿರುವ ಅಪರಾಧಕ್ಕೆ ಹತ್ತು ರೂಪಾಯಿಗಳನ್ನು ಮೀರದಂತೆ, ಸದರಿ ಅಧಿಕಾರಿಯು ಸೂಕ್ತವೆಂದು ಭಾವಿಸುವಂತಹ ಮೊಬಲಗನ್ನು, ಸಂದಾಯಮಾಡಿದ ಮೇಲೆ ಅಂತಹ ಯಾವುದೇ ಅಪರಾಧದ ಬಗ್ಗೆ ರಾಜಿ ಮಾಡಿಕೊಳ್ಳಬಹುದು.

**17. 30(2)(ಕೆ) ಪ್ರಕರಣದಡಿ ವಹಿಗಳು ಮತ್ತು ಇತರ ದಾಖಲೆಗಳು :**

(1) ಜನನ ವಹಿ, ಮರಣ ವಹಿ ಮತ್ತು ನಿರ್ಜೀವ ಜನನ ವಹಿಗಳು ಶಾಶ್ವತ ಪ್ರಾಮುಖ್ಯತೆಯ ದಾಖಲೆಗಳಾಗಿದ್ದು, ಅವುಗಳನ್ನು ನಾಶಪಡಿಸತಕ್ಕದ್ದಲ್ಲ.

(2) ಪ್ರಕರಣ 13ರಡಿ ತಡ ನೋಂದಣಿಗೆ ಅನುಮತಿ ನೀಡುವ ನ್ಯಾಯಾಲಯದ ಆದೇಶಗಳು, ನಿರ್ದಿಷ್ಟ ಪ್ರಾಧಿಕಾರದಿಂದ ಬಂದ ಆದೇಶಗಳು, ಜನನ ವಹಿ, ಮರಣ ವಹಿ ಮತ್ತು ನಿರ್ಜೀವ ಜನನ ವಹಿಗಳ ಅವಿಭಾಜ್ಯ ಅಂಗವಾಗಿದ್ದು, ಅವುಗಳನ್ನು ನಾಶ ಪಡಿಸತಕ್ಕದ್ದಲ್ಲ.

(3) 10ನೆಯ ಪ್ರಕರಣದ (3)ನೆಯ ಉಪ-ಪ್ರಕರಣದಡಿ ನೀಡಲಾಗುವ ಮರಣ ಕಾರಣ ದೃಢೀಕರಣ ಪತ್ರಗಳನ್ನು ಕನಿಷ್ಠ ಪಕ್ಷ ಐದು ವರ್ಷಗಳವರೆಗೆ ಮುಖ್ಯ ನೋಂದಣಾಧಿಕಾರಿಗಳು ಅಥವಾ ಅವರು ಗೊತ್ತುಪಡಿಸಿದ ಅಧಿಕಾರಿಗಳು ಅವರ ಪರವಾಗಿ ಕಾದಿರಿಸುವುದು.

(4) ಪ್ರತಿ ಜನನ ವಹಿ, ಮರಣ ವಹಿ ಮತ್ತು ನಿರ್ಜೀವ ಜನನದ ವಹಿಯನ್ನು ನೋಂದಣಿದಾರರು ತಮ್ಮ ಕಚೇರಿಯಲ್ಲಿ ಅವು ಯಾವ ವರ್ಷಕ್ಕೆ ಸಂಬಂಧಪಡುತ್ತವೋ, ಆ ಕ್ಯಾಲೆಂಡರ್ ವರ್ಷ ಮುಗಿದ ನಂತರ ಹನ್ನೆರಡು ತಿಂಗಳವರೆಗೆ ತಮ್ಮ ಕಬ್ಜೆಯಲ್ಲಿ ಕಾದಿರಿಸುವುದು ಮತ್ತು ನಂತರ ಆ ವಹಿಗಳನ್ನು ಗ್ರಾಮೀಣ ಪ್ರದೇಶಗಳಿಗೆ ಸಂಬಂಧಿಸಿದಂತೆ ತಹಸೀಲ್ದಾರರಿಗೆ ಹಾಗೂ ಪಟ್ಟಣ ಪ್ರದೇಶಗಳಿಗೆ ಸಂಬಂಧಿಸಿದಂತೆ ನಗರಪಾಲಿಕೆ/ನಗರಸಭೆ ಆಯುಕ್ತರು ಅಥವಾ ಪುರಸಭಾ ಮುಖ್ಯಾಧಿಕಾರಿಗಳಿಗೆ ಸುರಕ್ಷಿತವಾಗಿಡುವುದಕ್ಕಾಗಿ ವರ್ಗಾಯಿಸತಕ್ಕದ್ದು.

**18. ನಿರಸನಗೊಳಿಸುವಿಕೆ ಮತ್ತು ಉಳಿಸಿಕೊಳ್ಳುವಿಕೆ:** ಕರ್ನಾಟಕ ಜನನ ಮತ್ತು ಮರಣ ನೋಂದಣಿ ನಿಯಮಗಳು, 1970ನ್ನು ಈ ಮೂಲಕ ನಿರಸನ ಗೊಳಿಸಲಾಗಿದೆ.

ಪರಂತು, ಅಂತಹ ನಿರಸನವು;

(ಅ) ಮೇಲೆ ಹೇಳಲಾದ ನಿಯಮಗಳಡಿ ಈ ಹಿಂದಿನ ಕಾರ್ಯಚರಣೆ ಅಥವಾ ವಿಧ್ಯುಕ್ತವಾಗಿ ಮಾಡಲಾದ ಯಾವುದೇ ಕಾರ್ಯ ಅಥವಾ ಅನುಭವಿಸಿದ ಅಥವಾ

(ಅ) ಮೇಲೆ ಹೇಳಲಾದ ನಿಯಮಗಳಡಿ ಈಗಾಗಲೇ ಪ್ರಾಪ್ತವಾದ ಯಾವುದೇ ಹಕ್ಕು, ಹೊಣೆಗಾರಿಕೆ ಅಥವಾ ಬಾಧ್ಯತೆ ಅಥವಾ ಗುರಿಯಾದ ಕ್ರಿಯೆಗೆ ಯಾವುದೇ ಬಾಧಕ ಉಂಟುಮಾಡಲಾಗದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

© 2003, Directorate of Economics and Statistics, Govt. of Karnataka. All Rights Reserved.

(ಗುರುಮೂರ್ತಿ.ಎಸ್. ಹೆಗ್ಡೆ)
ಸರ್ಕಾರದ ಉಪ-ಕಾರ್ಯದರ್ಶಿ
(ಸಾಂಖ್ಯಿಕ ಹಾಗೂ ವಿ. ಮತ್ತು ತಂ)
ಯೋಜನೆ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಹಾಗೂ
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

© 2003, Directorate of Economics and Statistics, Govt. of Karnataka. All Rights Reserved.